# ತಪೋವಾಣಿ

ಸಂ. 9 ಸಂ. 10 | ಅಕ್ಟೋಬರ್ 2012 | ರೂ.25


**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು


**ಗುರೂಜಿ ಕೃಷ್ಣಾನಂದ**

**ಅನು: ಶ್ಯಾಮಲಾದೇವಿ**


ಒಬ್ಬ ವ್ಯಕ್ತಿ ನನ್ನನ್ನು ಕೇಳಿದರು, "ಡಿಸೆಂಬರ್ 2012ಕ್ಕೆ ಇನ್ನು ಮೂರು ತಿಂಗಳುಗಳು ಮಾತ್ರ ಉಳಿದಿವೆ. ಬದಲಾವಣೆಗಳಿಗೆ ಸಿದ್ಧನಾಗಲು ನನಗೆ ಇಷ್ಟು ಸಮಯ ಸಾಕೇ?" ಒಮ್ಮೆ ಒಬ್ಬ ವ್ಯಕ್ತಿ ನನ್ನ ಗುರುಗಳನ್ನು ಕೇಳಿದರು, ದೇವರಿಗೆ ಶರಣಾಗತನಾಗಲು ಎಷ್ಟು ಸಮಯ ಬೇಕಾಗುತ್ತದೆ? ನನ್ನ ಗುರು ಉತ್ತರಿಸಿದರು, ಅದಕ್ಕೆ ಒಂದು ನಿಮಿಷಕ್ಕಿಂತ ಕಡಿಮೆ ಸಮಯ ತೆಗೆದುಕೊಳ್ಳುತ್ತದೆ! ನೀವು ಪ್ರಾಮಾಣಿಕವಾಗಿ ಮತ್ತು ಸಂಪೂರ್ಣವಾಗಿ ಇಚ್ಛಿಸಬೇಕು ಎಂದು ಅವರು ವಿವರಿಸಿದರು. ಅದಕ್ಕೆ ಒಂದು ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.

ಡಿಸೆಂಬರ್ 2012ರ ಬದಲಾವಣೆಗಳಿಗೆ ಸಿದ್ಧರಾಗುವುದು ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ಹೊಸ ಯುಗವನ್ನು ಪ್ರವೇಶಿಸಲು ನಾವು ಆಧ್ಯಾತ್ಮೀಕರಿಸಬೇಕು. ಆಧ್ಯಾತ್ಮೀಕರಿಸುವುದೆಂದರೆ ಒಳ್ಳೆಯವರಾಗಿ, ಪ್ರಾಮಾಣಿಕರಾಗಿ ಮತ್ತು ಶಾಂತಿಯುತರಾಗಿ ಆಗುವುದು. ಅಧ್ಯಾತ್ಮವನ್ನು ಆಯ್ಕೆಮಾಡುವುದಕ್ಕೆ, ಒಂದು ನಿಮಿಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆಯ್ಕೆಮಾಡಿ ಮತ್ತು ಅದಕ್ಕೆ ಬದ್ಧರಾಗಿ. ನಾನು ಪ್ರತಿಯೊಬ್ಬರಿಗೂ ಹೇಳುತ್ತಿರುವುದು ಇದನ್ನೇ. ಜನರು ಕೇಳಿಸಿಕೊಳ್ಳುತ್ತಿದ್ದಾರೆ ಮತ್ತು ಪ್ರಯತ್ನಿಸುತ್ತಿದ್ದಾರೆ. ಕೆಲವರು ಆಯ್ಕೆಮಾಡಿದ್ದಾರೆ. ಕೆಲವರು ಪ್ರಯತ್ನಿಸುತ್ತಿದ್ದಾರೆ. ಕೆಲವರು ಆಯ್ಕೆಮಾಡಿ ಮತ್ತೆ ಹಳೆಯ ಜೀವನಕ್ಕೆ ಹಿಂದಿರುಗುತ್ತಾರೆ. ಅನೇಕರಿಗೆ ಇದರ ಬಗ್ಗೆ ತಿಳಿದಿಲ್ಲ.

ಡಿಸೆಂಬರ್ ತಿಂಗಳಲ್ಲಾಗುವ ಘಟನೆಗಳ ಮತ್ತು ಆಯ್ಕೆಮಾಡುವುದರ ಮಹತ್ವದ ಬಗ್ಗೆ ತಿಳಿಯದಿರುವವರನ್ನು ನಮ್ಮ ಆಸ್ಟ್ರಲ್ ಬೆಳಕಿನ ಕಾರ್ಯಕರ್ತರು ಸೂಕ್ಷ್ಮ ಮಟ್ಟದಲ್ಲಿ ಸಂಧಿಸಿ, ಅವರು ಸಿದ್ಧರಾಗಲು ಸಹಾಯ ಮಾಡುತ್ತಿದ್ದಾರೆ. ಇಂತಹ ಕಾರ್ಯಗಳು ಸಂಭವಿಸುತ್ತಿರುವುದು, ಈ ಮಟ್ಟದಲ್ಲಿ ಅವರಿಗೆ ತಿಳಿಯದಿರಬಹುದು. ಆದರೆ, ನಾನು ಹೇಳುತ್ತೇನೆ, ಅದು ಮುಖ್ಯವಲ್ಲ. ಯಾವುದೇ ಒಂದು ನಿರ್ದಿಷ್ಟ ಕಾಲದಲ್ಲಿ, ನಮಗೆ ಸೂಕ್ಷ್ಮ ಮಟ್ಟದಲ್ಲಿ ಸಂಭವಿಸುವ ಕಾರ್ಯಗಳ ಬಗ್ಗೆ ತಿಳಿದಿರುವುದಿಲ್ಲ. ಆದರೆ ಸೂಕ್ಷ್ಮ ಮಟ್ಟದಲ್ಲಿ ಕಲಿಸಿದ್ದನ್ನು ನಾವು ಈ ಮಟ್ಟದಲ್ಲಿ ನಮಗರಿವಿಲ್ಲದೆಯೇ ಅನುಸರಿಸುತ್ತಿರುತ್ತೇವೆ.

ಋಷಿಗಳು ಸಾವಿರಾರು ಸ್ಥಳಗಳಲ್ಲಿ ಸೂಕ್ಷ್ಮಮಟ್ಟದಲ್ಲಿ ತರಗತಿಗಳನ್ನು ನಡೆಸುತ್ತಿದ್ದಾರೆ ಮತ್ತು ವರ್ಷಾಂತ್ಯದಲ್ಲಿ ನಿರೀಕ್ಷಿತವಿರುವ ಬೃಹತ್ ಬದಲಾವಣೆಗಳಿಗೆ ಜನರನ್ನು ಸಿದ್ಧಗೊಳಿಸುತ್ತಿದ್ದಾರೆ. ಅನೇಕರು ಹೊಸ ವಾಸ್ತವಗಳಿಗೆ ಎಚ್ಚೆತ್ತಿದ್ದಾರೆ. ಸಂಭವಿಸಬಹುದಾದ ಬದಲಾವಣೆಗಳನ್ನು ಒಪ್ಪಿಕೊಳ್ಳದಿರುವವರು ಮುಖಂಡರು ಮಾತ್ರ. ಮುಖಂಡರು ಮತ್ತು ಎಲ್ಲ ವ್ಯವಸ್ಥೆಗಳ ಅಧಿಕಾರದಲ್ಲಿರುವ ಜನರು ಒಪ್ಪಿಕೊಳ್ಳುವವರಲ್ಲಿ ಕೊನೆಯವರು. ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ವೈದ್ಯಕೀಯ, ಸಾಮಾಜಿಕ, ಮುಂತಾದ ವ್ಯವಸ್ಥೆಗಳು ಶೀಘ್ರವಾಗಿ ಬದಲಾದರೆ, ಅವು ಬದಲಾವಣೆಗಳನ್ನು ತರುವುದಕ್ಕೆ ಸಹಾಯಮಾಡಬಹುದು. ಆದರೆ ವ್ಯವಸ್ಥೆಗಳು ಸಿದ್ಧವಾಗಿಲ್ಲ. ಯಾವಾಗಲೂ ಮನುಕುಲದ ಏಳಿಗೆಗಾಗಿ ಹೋರಾಡಿದವರು ಅಥವಾ ಕೆಲಸ ಮಾಡಿದವರು ಅಧಿಕಾರಯುತ ಸ್ಥಾನಗಳಲ್ಲಿರುವ ಕೆಲವರು ಮಾತ್ರ. ಎಲ್ಲ ಭ್ರಷ್ಟ ವ್ಯವಸ್ಥೆಗಳೂ ಕುಸಿಯುವುದನ್ನು ನಾನು ನಿರೀಕ್ಷಿಸುತ್ತಿದ್ದೇನೆ. ರಿಪೇರಿ ಮಾಡಲಾಗದಂಥ ಘಟ್ಟಗಳನ್ನು ಅವು ತಲುಪಿವೆ. ಅದಕ್ಕಾಗಿಯೇ ವಿನಾಶವನ್ನು ತಪ್ಪಿಸಲಾಗುವುದಿಲ್ಲ. ವ್ಯವಸ್ಥೆಗಳ ವಿನಾಶ ಮತ್ತು ಅವುಗಳಿಗೆ ಬದ್ಧರಾಗಿರುವ ಜನರ ವಿನಾಶವನ್ನು ತಪ್ಪಿಸಲಾಗುವುದಿಲ್ಲ.

ಎಲ್ಲವನ್ನೂ ಗಮನಿಸುತ್ತಿರುವ ಮತ್ತು 2012ರ ನಂತರದ ಜೀವನಕ್ಕಾಗಿ ಕೆಲಸ ಮಾಡುತ್ತಿರುವ ಋಷಿಗಳಿಗೆ ಇವೆಲ್ಲವೂ ತಿಳಿದಿದೆ. 2012ರ ನಂತರದ ಜೀವನಕ್ಕಾಗಿ ಅವರಲ್ಲಿ ಯೋಜನೆಗಳಿವೆ. ಅವರು ಅವನ್ನು ನಮಗೆ ಪ್ರಕಟಪಡಿಸಬಹುದು ಅಥವಾ ಹಾಗೆ ಮಾಡದಿರಬಹುದು. ಆದರೆ, ಇಷ್ಟು ಮಾತ್ರ ಖಚಿತ, ಯಾರು ಆಯ್ಕೆ ಮಾಡಿಕೊಂಡಿರುವವರೋ ಅವರೆಲ್ಲರನ್ನೂ ಸಂರಕ್ಷಿಸುತ್ತಾರೆ. ■


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.

✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)

ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

## ಸುದ್ದಿ-ಸೂಚನೆ

- 20 ಜನ ಕಾರ್ಯಕರ್ತರನ್ನೊಳಗೊಂಡ ತಂಡವೊಂದು 'ಬೆಳಕಿನಿಂದ ಕ್ರಾಂತಿ'ಯನ್ನು ಇಂಟರ್‌ನೆಟ್ ಮುಖಾಂತರ ಹರಡುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ.
- ಅವರ ಈ ಪ್ರಾಮಾಣಿಕ ಪ್ರಯತ್ನಗಳಿಂದಾಗಿ, ನಾವು ಫೇಸ್‌ಬುಕ್, ಟ್ವಿಟರ್, ಯುಟ್ಯೂಬ್, ಸ್ಪೀಕಿಂಗ್ ಟ್ರೀ, ವರ್ಡ್‌ಪ್ರೆಸ್ ಮತ್ತು ಇನ್ನೂ ಅನೇಕ ಬ್ಲಾಗ್‌ಗಳ ಮೂಲಕ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗಿದೆ. ನಮ್ಮ ಬ್ಲಾಗ್‌ಗಳು ಮತ್ತು URLಗಳು ಈ ಕೆಳಗಿನಂತಿವೆ;
  http://lightchannelsworldmovement.wordpress.com
  http://lightchannelsworldmovement.blogspot.in
  http://www.speakingtree.in/swami.krishnananda
  http://www.tumblr.com/blog/lightchannels
- ನಾವು ಫೇಸ್‌ಬುಕ್‌ನಲ್ಲಿ ಗುರೂಜಿಯವರ ಫೇಸ್‌ಬುಕ್ ಪುಟ ಮತ್ತು ಇನ್ನಿತರ ಪುಟಗಳನ್ನು ಹೊಂದಿದ್ದೇವೆ. ಅವು ಈ ಕೆಳಗಿನಂತಿವೆ;
  http://www.facebook.com/ExperiencesofLightChannels (Fans Page)
  http://www.facebook.com/QuotesfromtheRishis (Fans Page)
  http://www.facebook.com/groups/lightchannelsworldmovement (Facebook Group)
- ಗುರೂಜಿಯವರ ಭಾನುವಾರದ ತರಗತಿಯ ಪ್ರಮುಖ ಅಂಶಗಳನ್ನು ನಮ್ಮ ಬ್ಲಾಗ್‌ಗಳಲ್ಲಿ ಪ್ರತಿವಾರ ಎರಡು ಬಾರಿ ಹಾಕಲಾಗುತ್ತದೆ.
- ಗುರೂಜಿಯವರ ಭಾನುವಾರದ ತರಗತಿಯ ಪ್ರಮುಖ ಅಂಶಗಳನ್ನೊಳಗೊಂಡ ವೀಡಿಯೋಗಳ ಸಣ್ಣಸಣ್ಣ ತುಣುಕುಗಳನ್ನು ಯುಟ್ಯೂಬ್‌ನಲ್ಲಿ ಪ್ರಕಟಿಸಲಾಗುತ್ತದೆ. ಪ್ರಪಂಚದಾದ್ಯಂತ 40,000ಕ್ಕೂ ಹೆಚ್ಚು ಜನ ಇದನ್ನು ವೀಕ್ಷಿಸುತ್ತಾರೆ. ಈ ವೀಡಿಯೋಗಳು ದೊರಕುವ ಚಾನಲ್‌ನ ವಿವರಗಳು,
  Youtube – Video channel name – ManasaFoundation
  Disclose TV – Video channel name – ManasaFoundation
- ನಾವು ನಿಯಮಿತವಾಗಿ ಸಂದೇಶಗಳನ್ನು ಟ್ವಿಟರ್‌ನಲ್ಲಿ ಹಾಕುತ್ತೇವೆ. ನಮ್ಮ ಟ್ವಿಟರ್ ಹ್ಯಾಂಡಲ್- @light_channel.
- ಇದಲ್ಲದೆ ನಾವು 'ಬೆಳಕಿನಿಂದ ಕ್ರಾಂತಿ'ಯ ಬಗೆಗಿನ ಅರಿವನ್ನು ಲಿಂಕೆಡಿನ್, ಗೂಗಲ್+,ಆರ್ಕುಟ್ ಮತ್ತು ಫ್ಲಿಕರ್‌ನಲ್ಲೂ ಹರಡುತ್ತಿದ್ದೇವೆ.
- 26-8-2012ರಂದು ತಪೋನಗರದಲ್ಲಿ ನಡೆದ ಅಮರರವರ ಮಹಾಸಮಾಧಿ ಕಾರ್ಯಕ್ರಮದಲ್ಲಿ "Pyramid Revelations", "Guruji Speaks – Vol 6", "Channelled Knowledge from the Rishis – Vol 3", "iGuruji – Vol 7 " ಮತ್ತು "ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು" ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.
- ಅಮರರವರ ಮಹಾಸಮಾಧಿ ಕಾರ್ಯಕ್ರಮದ ಸಂದರ್ಭದಲ್ಲಿ, ಸುಮಾರು 70 ಜನರು 25-8-2012ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಮತ್ತು ಸುಮಾರು 350 ಜನರು 26-8-2012ರಂದು ತಪೋನಗರದಲ್ಲಿ ಭಾಗವಹಿಸಿದ್ದರು ಮತ್ತು ಎಲ್ಲರೂ ಗುರೂಜಿಯವರಿಂದ ಆಶೀರ್ವಾದಗಳನ್ನು ಪಡೆದರು.
- ಗುರೂಜಿಯವರ ಭಾನುವಾರದ ತರಗತಿಯ ವೆಬ್‌ಕಾಸ್ಟ್‌ನ ಸೌಲಭ್ಯ, ನಿಯಮಿತವಾಗಿ ಧ್ಯಾನಮಾಡುವ ಮತ್ತು ಅಭ್ಯಾಸವರದಿಗಳನ್ನು ಕಳುಹಿಸುವ ಸಾಧಕರಿಗೋಸ್ಕರ ಇದೆ. ನಿಗದಿತ ಸಮಯದಲ್ಲಿ ಅಭ್ಯಾಸವರದಿಗಳು ಬಾರದೇ ಇದ್ದಲ್ಲಿ ಈ ಸೌಲಭ್ಯವನ್ನು ಹಿಂತೆಗೆದುಕೊಳ್ಳಲಾಗುವುದು.
- ನಮ್ಮ ಎಲ್ಲಾ ಸಾಧಕರು ವಾರ್ತಾಪತ್ರದ ನವೀಕರಣ ಪತ್ರ ತಲುಪಿದ ಕೂಡಲೇ ನವೀಕರಿಸಿಕೊಳ್ಳಬೇಕಾಗಿ ವಿನಂತಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 08 | ಸೋಮ | ಕೃಷ್ಣ ಅಷ್ಟಮಿ |
| 14 | ಭಾನು | ಮಾಸ ಶಿವರಾತ್ರಿ |
| 15 | ಸೋಮ | ಮಹಾಲಯ ಅಮಾವಾಸ್ಯೆ |
| 16 | ಮಂಗಳ | ನವರಾತ್ರಿ ಆರಂಭ |
| 20 | ಶನಿ | ಸರಸ್ವತಿ ಪೂಜೆ |
| 22 | ಸೋಮ | ದುರ್ಗಾಷ್ಟಮಿ |
| 23 | ಮಂಗಳ | ಮಹಾ ನವಮಿ ಆಯುಧ ಪೂಜೆ |
| 24 | ಬುಧ | ವಿಜಯ ದಶಮಿ |
| 29 | ಸೋಮ | ಪೂರ್ಣಿಮಾ |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು:ಉಪನ್ಯಾಸಗಳು : ಬೆಳಿಗ್ಗೆ 11-12
ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1

13-10-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

ಸಂ: ಜಯಂತ್ ದೇಶ್‌ಪಾಂಡೆ; ಅನು: ವರ್ಷಾ ದೀಪಕ್

- ಒಂದು ಶಾಲೆಯ ಪ್ರಾಂಶುಪಾಲರು ಅವರ ಶಾಲೆಯಲ್ಲಿ ಲೈಟ್ ಚಾನಲಿಂಗ್ ಪರಿಚಯಿಸಲು ಒಲ್ಲದ ಮನಸ್ಸಿನಿಂದ ಅದು ಹೇಗೋ ಅನುಮತಿಯನ್ನು ನೀಡಿದರು. ಆದರೆ ಸೆಷನ್ ನಂತರ, ಅವರು ನಮ್ಮ ಕಾರ್ಯಕರ್ತರನ್ನು ಅದೇ ವಾರದಲ್ಲಿ ಇನ್ನೂ ಮೂರುಬಾರಿ ಈ ಸೆಷನ್ ನಡೆಸಲು ಕೇಳಿಕೊಂಡರು! ಇನ್ನೊಂದು ಶಾಲೆಯಲ್ಲಿ, ಒಂದು ತರಗತಿಯ ಮಕ್ಕಳು ಅತ್ಯಂತ ತುಂಟತನ ಮತ್ತು ಮೊಂಡುತನದವರಾಗಿದ್ದರು. ಆದರೆ ನಮ್ಮ ಲೈಟ್ ಚಾನಲ್ ಕಾರ್ಯಕರ್ತರು ಆ ತರಗತಿಯಲ್ಲಿ ಲೈಟ್ ಚಾನಲಿಂಗ್ ಬಗ್ಗೆ ಹೇಳಿದಾಗ ಅವರು ಅದನ್ನು ಗಮನವಿಟ್ಟು ತಾಳ್ಮೆಯಿಂದ ಕೇಳಿ, ಮೌನವಾಗಿ ಬೆಳಕನ್ನು ಚಾನಲ್ ಕೂಡಾ ಮಾಡಿದರು!
- ನಮ್ಮ ಕಾರ್ಯಕರ್ತರು ಹೊಂದಿರುವ ಬೆಳಕು ಅದು ಹೇಗೋ ವ್ಯಕ್ತಿಗಳನ್ನು ತಲುಪುತ್ತದೆ; ಅವರು ಬೆಳಕಿಗೆ ತಮ್ಮನ್ನು ತೆರೆದುಕೊಳ್ಳುವಂತೆ ಮಾಡುತ್ತದೆ.
- ಆಗಸ್ಟ್ ತಿಂಗಳಲ್ಲಿ ನಮ್ಮ ಕಾರ್ಯಕರ್ತರು ಹೆಚ್ಚು ಚಟುವಟಿಕೆಯಿಂದ ಕೂಡಿದ್ದು, ನೂರಾರು ಶಾಲೆಗಳಿಗೆ ಭೇಟಿ ನೀಡಿದ್ದಾರೆ. ಅವರು 500ಕ್ಕೂ ಹೆಚ್ಚು ಲೈಟ್ ಚಾನಲ್ ಸೆಷನ್‌ಗಳನ್ನು ನಡೆಸಿ, 1.75 ಲಕ್ಷಕ್ಕೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸಿದ್ದಾರೆ. ಇದು, 4 ಲಕ್ಷಕ್ಕೂ ಹೆಚ್ಚು ಮಕ್ಕಳು ಬಹುತೇಕ ಪ್ರತಿನಿತ್ಯದ ತಮ್ಮ ಶಾಲಾಪ್ರಾರ್ಥನೆಯಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದಕ್ಕೆ ಹೆಚ್ಚುವರಿಯದಾಗಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ನನಗೆ ಹೆಚ್ಚು ಸಕಾರಾತ್ಮಕತೆ ನನ್ನೊಳಗೆ ತುಂಬಿ, ಅರಳುತ್ತಿರುವಂತೆ ಅನಿಸುತ್ತದೆ. ನಾನು ಲೈಟ್ ಚಾನಲಿಂಗ್ ಮಾಡಿದಾಗಲೆಲ್ಲಾ, ನನ್ನ ತಲೆಯಲ್ಲಿ ಪ್ರಕಾಶಮಾನವಾದ ಬೆಳಕನ್ನು ಅನುಭವಿಸುತ್ತೇನೆ. ನಾನು ಎದುರಿಸುತ್ತಿರುವ ಸಮಸ್ಯೆಗಳೆಲ್ಲಾ ಹಾಗೆಯೇ ಇವೆ, ಆದರೆ ಅವೆಲ್ಲಾ ಅತ್ಯಂತ ಸಣ್ಣವು ಎಂದು ನನಗನಿಸುತ್ತದೆ ಹಾಗೂ ನನ್ನ ಬಗೆಗಿನ ನಕಾರಾತ್ಮಕತೆ ಅಥವಾ ಟೀಕೆಗಳ ಪ್ರಭಾವ ಈಗ ನನ್ನ ಮೇಲೆ ಆಗುವುದಿಲ್ಲ. ನಾನು ಆನಂದದಿಂದ ಕೂಡಿದ್ದೇನೆ.

– ಶ್ರೀಕಲಾ, ಬಿಬಿಎಂ ವಿದ್ಯಾರ್ಥಿ, ಶೇಷಾದ್ರಿಪುರಂ ಕಾಲೇಜ್, ಯಲಹಂಕ

ನಮಗೆ ತರಗತಿಯಲ್ಲಿ ಹೆಚ್ಚು ಅಸೈನ್‌ಮೆಂಟ್ ಕೊಟ್ಟಿದ್ದರು. ನನ್ನ ಸುತ್ತಲಿನ ಜನ ಅತ್ಯಂತ ಸ್ಪರ್ಧಾತ್ಮಕ ಜನರಾಗಿದ್ದರು. ಅದೊಂದು ಆರ್ಥಿಕ ವ್ಯವಸ್ಥೆಯ ಕುರಿತಾದ ಪ್ರಾಜೆಕ್ಟ್ ಆಗಿದ್ದು, ನಾವು ಅದರ ಬಗ್ಗೆ ಪರಿಚಯ ನೀಡಬೇಕಾಗಿತ್ತು. ನನಗೆ ಗ್ರಾಫಿಕ್ಸ್‌ನಂತಹ ವಿಷಯಗಳ ಬಗ್ಗೆ ಹೆಚ್ಚು ಗೊತ್ತಿರದ ಕಾರಣ, ನಾನು ಬೆಳಕಿಗೆ ನನ್ನ ಸಮಸ್ಯೆಯನ್ನು ಹೇಳಿಕೊಂಡು ಸ್ಲೈಡ್ಸ್(slides) ತಯಾರು ಮಾಡಿದೆ. ನಾನು ಅದಕ್ಕಾಗಿ ಮಾಹಿತಿಯನ್ನು ಕಲೆಹಾಕಿದೆ, ಉದಾಹರಣೆಗಳನ್ನು ನೀಡಿದೆ ಮತ್ತು ಹೆಚ್ಚಿನ ಆತ್ಮವಿಶ್ವಾಸವನ್ನು ಗಳಿಸಿದೆ. ನಾನು ಅದನ್ನು ಪ್ರಸ್ತುತ ಪಡಿಸಲು ಸ್ಟೇಜ್ ಹತ್ತಿದಾಗ, ಬೆಳಕನ್ನು ನೆನಸಿಕೊಂಡೆ ಮತ್ತು ಆ ದಿನ ನನ್ನದಾಗಿತ್ತು! ನನ್ನ ಪ್ರಸ್ತುತ ಪಡಿಸುವಿಕೆ ಕಾರ್ಯಕ್ರಮ ಅತ್ಯುತ್ತಮವಾಗಿತ್ತು! ನನ್ನ ಶಿಕ್ಷಕರಿಂದ ಮತ್ತು ಗೆಳೆಯರಿಂದ ಉತ್ತಮ ಪ್ರತಿಕ್ರಿಯೆಗಳನ್ನು ಪಡೆದೆ. ಇದೊಂದು ಪವಾಡವೇ ಸರಿ! ನಾನು ಬೆಳಕನ್ನು ಇಷ್ಟಪಡುತ್ತೇನೆ. ಅದು ನನಗೆ ಹೆಚ್ಚಿನ ಚೈತನ್ಯವನ್ನು ಮತ್ತು ಬೆಂಬಲವನ್ನು ನೀಡುತ್ತದೆ ಹಾಗೂ ಅದು ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ.

– ಕಾವ್ಯಶ್ರೀ ಆರ್., ಬಿ.ಕಾಂ. ವಿದ್ಯಾರ್ಥಿ

## ತಪೋನಗರ ಡೈರಿ

ಸೀಮಾ ಅಲ್‌ಮೇಲ್ ಸೋಮಾಯಾಜಿ; ಅನು: ಪಾಂಡುರಂಗ

ಜನ್ಮಾಷ್ಟಮಿಯಂದು ತಪೋನಗರಕ್ಕೆ ಹಾಗೂ ಪ್ರಪಂಚದಲ್ಲೆಡೆ ಶ್ರೀಕೃಷ್ಣನ ಅಂಶದ ಆಗಮನವಾಯಿತು. ಅಂದು ತಪೋನಗರದಲ್ಲಿ ವಿಶೇಷ ಧ್ಯಾನವನ್ನು ಆಯೋಜಿಸಲಾಗಿತ್ತು, ರಾತ್ರಿ ಎಲ್ಲ ಧ್ಯಾನಿಗಳನ್ನೂ ಶ್ರೀಕೃಷ್ಣನಿಂದ ಆಶೀರ್ವಾದಗಳನ್ನು ಪಡೆಯಲು ಬೃಂದಾವನಕ್ಕೆ ಸೂಕ್ಷ್ಮಮಟ್ಟದಲ್ಲಿ ಕರೆದೊಯ್ಯಲಾಯಿತು.

ಆಗಸ್ಟ್ 25ರಂದು ಮಹರ್ಷಿ ಅಮರರವರನ್ನು ಅವರದೇ ಆದ ತಪೋನಗರಕ್ಕೆ ಸ್ವಾಗತಿಸಲಾಗಿತ್ತು. ಇದೇ ದಿನ ಅಮರರವರು 1982ರಲ್ಲಿ ಈ ಭೂಮಿಯಿಂದ ನಿರ್ಗಮಿಸಿದುದರ ಸಂಕೇತವಾದರೂ, ಈ ದಿನ ಅವರು ತಮ್ಮ ಮೂಲ ನೆಲೆಯಾದ ಇಲ್ಲಿಗೆ ಭೇಟಿನೀಡುವ ದಿನವಾಗಿ ಪರಿಣಮಿಸಿದೆ. ಅವರು ಆ್ಯಂಡ್ರೊಮೆಡಾ ಗ್ಯಾಲಕ್ಸಿಯಲ್ಲಿ ವಾಸಿಸುತ್ತಿದ್ದರೂ, ಅವರು ಇಲ್ಲಿಯೂ ತಪೋನಗರಿಗರ ಹೃದಯಗಳಲ್ಲಿ ನೆಲೆಸಿದ್ದಾರೆ. ಇಲ್ಲಿನ ಪ್ರತಿಯೊಂದು ಮನೆಯೂ ಭಕ್ತಿಪೂರ್ವಕವಾಗಿ ಅವರ ಫೋಟೋವನ್ನು ಹೊಂದಿದೆ. ಆಗಸ್ಟ್ 26ರಂದು ಭಾನುವಾರ, ಅಮರರವರನ್ನು ಸ್ಮರಿಸಿಕೊಳ್ಳುವ ಸಂದರ್ಭವಾಗಿತ್ತು. ಸಮಯಕ್ಕೆ ಸರಿಯಾಗಿ ಎಲ್ಲ ಸಿದ್ಧತೆಗಳನ್ನು ಮಾಡಲಾಗಿತ್ತು, ಐದು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು ಮತ್ತು ಮುನ್ನೂರವೈತ್ತಕ್ಕೂ ಹೆಚ್ಚು ಧ್ಯಾನಿಗಳು ಗುರೂಜಿಯವರಿಂದ ವೈಯಕ್ತಿಕವಾಗಿ ಆಶೀರ್ವಾದ ಪಡೆದುಕೊಂಡರು.

ತಪೋನಗರದ ದಾಹ ತಣಿಸಲು ಮಾನ್ಸೂನ್ ಇನ್ನೂ ಮಳೆಗರೆಯಬೇಕಿದೆ. ಆದಾಗ್ಯೂ ನೀರಿನ ಅಭಾವ ಸಮಸ್ಯೆಯಾಗಿ ಕಂಡುಬಂದಿಲ್ಲ, ಪ್ರತಿಯೊಂದು ಮನೆಗೂ ಅಗತ್ಯವಿರುವಷ್ಟು ನೀರು ಸಿಗುತ್ತಿದೆ.

ಎಂದಿನಂತೆ ತಪೋನಗರ ನಿವಾಸಿಗಳ ಕೂಟದ ನಂತರ ತಪೋನಗರಿಗರು ಭೋಜನ ಕೂಟದಲ್ಲಿ ಭಾಗವಹಿಸಿದರು. ಮರುದಿನ ಶ್ರೀಯುತ ಚಂದ್ರನ್ ಕೃಷ್ಣನ್‌ರವರ ಮತ್ತು ಅದರ ಮರುದಿನ ಶ್ರೀಯುತ ಭಗವತ್ ಕುಮಾರ್‌ರವರ ಗೃಹಪ್ರವೇಶದ ಸಮಾರಂಭದ ಭೋಜನಕೂಟದಲ್ಲಿ ಎಲ್ಲರೂ ಸೇರಿ ಆನಂದಿಸಿದರು. ಈ ಎಲ್ಲ ಸ್ಮರಣೀಯ ಕೂಟಗಳಲ್ಲಿ ಗುರೂಜಿಯವರೊಂದಿಗಿನ ಸಂಭಾಷಣೆಗಳು, ಋಷಿಗಳ ಕಾರ್ಯಯೋಜನೆಯ ಒಂದು ಭಾಗವಾದ ನಮ್ಮ ಪಾತ್ರಗಳ ಬಗ್ಗೆ ಹೊಸ ಒಳನೋಟಗಳನ್ನು ನೀಡಿದವು. ಗುರೂಜಿಯವರ ಬೆಳಕಿನಲ್ಲಿ ಮತ್ತು ಅವರ ಮುಖಾಂತರ ಅಮರರವರ ಬೆಳಕಿನಲ್ಲಿಯೂ ಸಹ ತಪೋನಗರ ಬದುಕುತ್ತಿದೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

05–08–2012

ಒಬ್ಬ ವ್ಯಕ್ತಿ ಒಂದು ಸುಂದರವಾದ ವಿಷಯವನ್ನು ಗಮನಿಸಿದರು: ತಪೋನಗರದಲ್ಲಿ ವಾಸಿಸುವ ಜನ ಸಾಮಾನ್ಯರಂತೆ ಕಾಣುತ್ತಾರೆ. ಆದರೆ ಹೀಗೆ ಸಾಮಾನ್ಯರಂತೆ ಕಾಣುವ ಜನರು ಕೆಲವೊಮ್ಮೆ ಹಠಾತ್ತನೆ ಒಂದು ರೀತಿಯಲ್ಲಿ ದೇವತೆಗಳಂತೆ ಅತ್ಯದ್ಭುತವಾಗಿ ನಡೆದುಕೊಳ್ಳುತ್ತಾರೆ. ಇಂತಹ ವ್ಯಕ್ತಿಗಳನ್ನು ನಾವು ಪ್ರಶಂಸಿಸಬೇಕು, ಎಂದು ಹೇಳಿದರು. ಇದು ತಪೋನಗರದಲ್ಲಿ ಮತ್ತು ಪ್ರಪಂಚದ ಎಲ್ಲಾ ಕಡೆ ಸಂಭವಿಸುತ್ತಿದೆ. ಜನರು "ನಾವು ಬೆಳಕನ್ನು ಆರಿಸಿಕೊಂಡಿದ್ದೇವೆ ಎಂದು ಹೇಗೆ ತಿಳಿಯುತ್ತದೆ?" ಎಂದು ಪ್ರಶ್ನಿಸುತ್ತಾರೆ. ಜನರು ಅಪರೂಪವಾಗಿ ಆದರೂ ಅತ್ಯದ್ಭುತವಾಗಿ ನಡೆದುಕೊಂಡರೆ ಅದರ ಅರ್ಥ ಅವರು ಬೆಳಕನ್ನು ಆರಿಸಿಕೊಂಡಿದ್ದಾರೆ ಎಂದು.

ಒಬ್ಬ ವ್ಯಕ್ತಿ ನನಗೆ ಒಂದು ದೊಡ್ಡ ಮೇಲ್ ಅನ್ನು ಬರೆದು, ಕುಸಿತಗಳು ಸಂಭವಿಸಿದಾಗ ಏನು ಮಾಡಬೇಕೆಂದು ಕೇಳಿದರು. ಅವರು 2012ರ ನಂತರದ ಘಟನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಬಯಸಿದ್ದರು. ನಾವು ಸಂಭವನೀಯತೆಗಳ ಬಗ್ಗೆ ಮಾತನಾಡಿದ್ದೇವೆ. ಎಷ್ಟರ ಮಟ್ಟಿಗೆ ವಿನಾಶವನ್ನು ಅನುಮತಿಸಬಹುದು, ವಿನಾಶ ಇರಬೇಕೇ ಅಥವಾ ಇಲ್ಲವೇ ಇಂತಹ ವಿಷಯಗಳು ಉನ್ನತ ಮಟ್ಟದಲ್ಲಿ ಇನ್ನೂ ನಿರ್ಧಾರವಾಗಬೇಕಿದೆ. 2012ರ ಕೊನೆಯ ಘಟನೆಗಳಿಗೆ ಸಿದ್ಧಪಡಿಸಿಕೊಳ್ಳಲು ನಮಗೆ ಹೆಚ್ಚಿನ ಜ್ಞಾನ, ತಂತ್ರಗಳು ಮತ್ತು ಅತ್ಯಂತ ಸರಳ, ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ. ಆಧ್ಯಾತ್ಮೀಕರಿಸಿಕೊಳ್ಳಿ ಮತ್ತು ಒಳ್ಳೆಯತನ ರೂಢಿಸಿಕೊಳ್ಳಿ, ಅಷ್ಟೇ ಸಾಕು. ನಾವು ಇದರಿಂದ ಪಾರಾಗುತ್ತೇವೆ ಅಥವಾ ನಮ್ಮನ್ನು ಋಷಿಗಳು ರಕ್ಷಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನನ್ನು ವೈಯಕ್ತಿಕವಾಗಿ ಸಂಪರ್ಕಿಸುವ ಸನ್ನಿವೇಶವನ್ನು ನಾನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುತ್ತಿದ್ದೇನೆ. ಋಷಿಗಳು ಅನೇಕ ಯೋಜನೆಗಳನ್ನು ಹೊಂದಿದ್ದಾರೆ. ಯಾವ ಯೋಜನೆಯನ್ನು ಅವರು ಅನುಸರಿಸುತ್ತಾರೆ ಎಂಬುದು ನಮಗೆ ತಿಳಿದಿಲ್ಲ. ನಮ್ಮಲ್ಲಿ ಎಷ್ಟು ಜನರು ಆಯ್ಕೆ ಮಾಡಿಕೊಂಡಿದ್ದಾರೆ ಮತ್ತು ಬದಲಾಗಿದ್ದಾರೆ ಎಂಬುವುದರ ಮೇಲೆ ಅದು ಅವಲಂಬಿಸಿದೆ. ಆ ವ್ಯಕ್ತಿಗೆ, ತಾಳ್ಮೆಯಿಂದ ಇರಿ ಮತ್ತು ಆಧ್ಯಾತ್ಮೀಕರಿಸಿಕೊಳ್ಳಿ, ಎಂದು ಬರೆದೆ. 2012ರ ಘಟನೆಗಳಿಗೆ ಸಂಬಂಧಿಸಿದಂತೆ ಇನ್ನೊಂದು ಭಾಗವಿದೆ. ಸೂಕ್ಷ್ಮ ಲೋಕದಲ್ಲಿ ಪ್ರತಿದಿನವೂ, ಪ್ರತಿ ನಿಮಿಷವೂ ಅನೇಕ ವಿಷಯಗಳು ಸಂಭವಿಸುತ್ತಿರುತ್ತವೆ. ಬಹುಶಃ 98% ಭಾಗ ನಮಗೆ ಅದು ತಿಳಿಯುವುದಿಲ್ಲ. ಇದಕ್ಕಾಗಿ ನಾವು ವಿಷಾದ ಪಡಬೇಕಾಗಿಲ್ಲ. ನಾವು ಅವುಗಳನ್ನು ತಿಳಿಯಬೇಕಿಲ್ಲ. ಈ ದೇಹಕ್ಕೆ ಒಂದು ಮಿತಿಯಿದೆ. ನಾವು ಉನ್ನತ ಸತ್ಯಗಳನ್ನು ತಿಳಿಯಲಾರೆವು. ದೇಹಗಳನ್ನು ತೊರೆದ ಜನರನ್ನು ಭೇಟಿ ಮಾಡಿದಾಗ ಮಾತ್ರ ನೀವು ತಿಳಿಯುವಿರಿ. ಅವರು "ಓಹ್! ದೇವರೆ, ಅರ್ಥ ಮಾಡಿಕೊಳ್ಳಲು ಎಷ್ಟೊಂದು ವಿಷಯಗಳಿವೆ. ದೇಹವನ್ನು ಬಿಟ್ಟಿದ್ದು ನನಗೆ ಬಹಳ ಸಂತೋಷವೆನಿಸಿದೆ. ದೇಹ ನಮ್ಮನ್ನು ಹೆಳವರನ್ನಾಗಿ, ಅಂಧರನ್ನಾಗಿ ಮಾಡಿತ್ತು. ಆದ್ದರಿಂದ ನಾವು ದೇಹದಿಂದ ಹೊರಗೆ ಸೂಕ್ಷ್ಮ ಪ್ರಯಾಣ ಮಾಡಬೇಕು," ಎಂದು ಹೇಳುತ್ತಾರೆ. ಸೂಕ್ಷ್ಮ ಮಟ್ಟದಲ್ಲಿ ನಾವು ಅನೇಕ ವಿಷಯಗಳನ್ನು ತಿಳಿಯುತ್ತೇವೆ. ಆದರೆ ನಮ್ಮ ದೇಹಕ್ಕೆ ಹಿಂದಿರುಗಿ ಬಂದ ಮೇಲೆ ಬಹುಶಃ ನಾವು ಎಲ್ಲವನ್ನೂ ನೆನಪಿನಲ್ಲಿ ಇಟ್ಟುಕೊಳ್ಳಲಾಗುವುದಿಲ್ಲ. ಅದರ ಅಗತ್ಯವಿಲ್ಲ ಆದರೆ ಅಲ್ಲಿ ತಿಳಿದ ಮತ್ತು ಅನುಭವಿಸಿದ ವಿಷಯ ಹೇಗೋ ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಮುಖ್ಯ.

19–08–2012

ಇಲ್ಲಿ ಮಾತನಾಡುವ ಪ್ರತಿಯೊಂದು ಪದ, ವಾಕ್ಯ, ಆಚರಣೆಯಲ್ಲಿ ತರುವುದಕ್ಕಾಗಿ ಇದೆ. ಇದನ್ನು ನಾನು ಬಹಳ ಹಿಂದಿನಿಂದ ಹೇಳುತ್ತಿದ್ದೇನೆ. ಋಷಿಗಳು ಹೇಳುವ ಮೊದಲು, ಅದನ್ನು ಅಭ್ಯಾಸಮಾಡಿ, ಕೆಲವು ಕಾಲದವರೆಗೆ, ಕೆಲವೊಮ್ಮೆ ಅನೇಕ ಸಾವಿರ ವರ್ಷಗಳವರೆಗೆ ಪರೀಕ್ಷೆ ಮಾಡಿ, ಸಾಧ್ಯವಾದಷ್ಟೂ ಸರಳಗೊಳಿಸುತ್ತಾರೆ. ಆನಂತರವಷ್ಟೇ ನಮಗೆ ಕೊಡುತ್ತಾರೆ. ನಾವು ಇಲ್ಲಿ ಹೇಳಿದುದೆಲ್ಲವನ್ನೂ ಅಭ್ಯಾಸಮಾಡಲು ಸಾಧ್ಯ. ಈ ಮಾರ್ಗ ಮಾನವತೆಗೆ ನೀಡಿದ ಅತ್ಯದ್ಭುತ ಅವಕಾಶ. ಇದನ್ನು ನೀವು ಬಳಸಿಕೊಳ್ಳುತ್ತೀರೋ ಇಲ್ಲವೋ ನಾನು ನನ್ನ ಕೆಲಸ ಮಾಡುತ್ತಿದ್ದೇನೆ. ಕೆಲವು ಸಲ ಜನರು ತಮಗೆ ಉತ್ತರಗಳು ತಿಳಿದಿದ್ದೂ ಪ್ರಶ್ನೆಗಳನ್ನು ಕೇಳುತ್ತಾರೆ. ಇಂತಹ ಪ್ರಶ್ನೆಗಳನ್ನು ನನ್ನ ತಾಳ್ಮೆಯನ್ನು ಪರೀಕ್ಷಿಸಲು ಕೇಳುತ್ತಾರೇನೋ ಎಂದು ಕೆಲವು ಸಲ ನಾನು ಆಶ್ಚರ್ಯ ಪಡುತ್ತೇನೆ.

ಬೆಳಕು, ಅವ್ಯಕ್ತ ದೇವರಿಂದ ಬಂದ ಮೊದಲ ವ್ಯಕ್ತಗೊಂಡ ರೂಪ. ಅಂಧಕಾರ ನಂತರ ಬಂದುದಾಗಿದೆ. ಅಂಧಕಾರ ಎಂದರೆ ಬೆಳಕು ಇಲ್ಲದಿರುವುದು ಎಂದಲ್ಲ. ಇದನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಅಂಧಕಾರ ಒಂದು ವಿಶೇಷ ಅಸ್ತಿತ್ವ. ಬೆಳಕು ಇರುವಂತೆಯೇ ಅಂಧಕಾರವೂ ಇದೆ. ಅಂಧಕಾರ ಒಂದು ಚೈತನ್ಯವಲಯ. ಬೆಳಕಿನೆಡೆ ನಡೆಯಿರಿ ಮತ್ತು ಅದನ್ನು ಅನುಭವಿಸಿ. ಅಂಧಕಾರ ತನ್ನ ಕೆಲಸ ಮಾಡುತ್ತದೆ– ಅದು ಅನೇಕ ಗೊಂದಲಗಳನ್ನು ತಂದು ಅನುಮಾನಗಳನ್ನು ಸೃಷ್ಟಿಸುತ್ತದೆ, ಅದು ನಮ್ಮನ್ನು ತಡೆದು ಬೆಳಕಿನ ಕಡೆಗೆ ಹೋಗುವುದರಿಂದ ದಿಕ್ಕು ತಪ್ಪಿಸುತ್ತದೆ.

ನಿಮ್ಮ ಸುತ್ತ ಅನೇಕ ವಿಚಿತ್ರ ಘಟನೆಗಳು ಸಂಭವಿಸುತ್ತಿರುವುದನ್ನು ನೀವು ನೋಡುತ್ತಿದ್ದೀರಿ. ಇದು ಉಗ್ರಕ್ಷೋಭೆ. ಇದು ನಮ್ಮನ್ನು ನೇರವಾಗಿ ಅಲ್ಲದಿದ್ದರೂ ಹೇಗೋ ಪ್ರತಿಯೊಬ್ಬರನ್ನೂ ತಟ್ಟುತ್ತದೆ. ಧ್ಯಾನ ಮಾಡುವುದರಿಂದ, ಅರ್ಥ ಮಾಡಿಕೊಳ್ಳುವುದರಿಂದ ಮತ್ತು ಹೆಚ್ಚು ವಿಸ್ತೃತವಾಗುವುದರಿಂದ ನಾವು ಸಜ್ಜಾಗಬೇಕಿದೆ. ಆಗ ಮಾತ್ರ ನೀವು ಯಾವುದೇ ಸನ್ನಿವೇಶವನ್ನು ಸ್ವೀಕರಿಸಬಹುದು ಮತ್ತು ಎದುರಿಸಬಹುದು. ಅದನ್ನು ಒಂದು ಪರೀಕ್ಷೆ ಎಂದು ತಿಳಿಯಬೇಕು. ನೀವು ನೈತಿಕವಾಗಿ ಬಲಿಷ್ಠವಾಗಿದ್ದರೆ, ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ ಮತ್ತು ಅದರ ಬೆನ್ನಟ್ಟಿ ಹೋಗುವಿರಿ. ನೀವು ಎಚ್ಚರಿಕೆಯಿಂದ ಇರದಿದ್ದರೆ ನೋವನ್ನು ಅನುಭವಿಸುವಿರಿ. ಹೆಚ್ಚು ಎಚ್ಚರಿಕೆಯಿಂದ ಇರಲು ಮತ್ತು ವಿಸ್ತರಿಸಲು ಇದು ಸರಿಯಾದ ಕಾಲ. ಪ್ರೀತಿಯ ಬೆಳಕಿನಲ್ಲಿ ಬಾಳಿರಿ. ನೀವು ಪ್ರೀತಿ, ವಿವೇಕಗಳನ್ನು ಹೊಂದಿ ಪ್ರಾಮಾಣಿಕರಾಗಿದ್ದರೆ ಮಾತ್ರ ನೀವು ಬಹಳ ನಿರ್ಭಯದಿಂದ, ಸೂಕ್ತ ಜೀವನ ನಡೆಸಬಹುದು.

26–08–2012

ಹಲವಾರು ಜನ ಇಲ್ಲಿ ಮಾತನಾಡುವಾಗ ಅವರು ಯಾವುದನ್ನು ಹೇಳಬೇಕು ಅಥವಾ ಹೇಳಬಾರದೆಂಬುದರ ಬಗ್ಗೆ ಚರ್ಚೆ ಮಾಡದೇ ಇದ್ದರೂ ಅವರು ಯಾವ ಅಂಶಗಳನ್ನೂ ಪುನರಾವರ್ತನೆ ಮಾಡುವುದಿಲ್ಲ. ಅದು ಆಶ್ಚರ್ಯಕರ. ಉನ್ನತ ಬುದ್ಧಿಶಕ್ತಿಯೊಂದು ನಮ್ಮೆಲ್ಲರ ಮೂಲಕ ಕೆಲಸ ಮಾಡುತ್ತಿರುವುದನ್ನು ಇದು ಸೂಚಿಸುತ್ತದೆ.

ಮೂವತ್ತು ವರ್ಷಗಳ ಹಿಂದೆ ಅಮರರು ನಮ್ಮನ್ನು ಅಗಲಿದರು. ಅಂದಿನಿಂದ ನಾನು ಯಾವಾಗ ಸಂಪರ್ಕಿಸಿದರೂ ಅವರು ಬಂದು, ಸೂಚನೆ ಅಥವಾ ಅಸಾಧಾರಣ ಜ್ಞಾನವನ್ನು ಕೊಡುತ್ತಿದ್ದಾರೆ. ಇಷ್ಟು ವರ್ಷಗಳೂ ನನ್ನ ಗುರುವನ್ನು ನಾನು ಕಳೆದುಕೊಂಡಿಲ್ಲ, ಕಾರಣ ಅವರು ಯಾವಾಗಲೂ ನನ್ನ ಸಂಪರ್ಕದಲ್ಲಿದ್ದಾರೆ. ಅವರ ಚೈತನ್ಯಗಳು ಯಾವಾಗಲೂ ನನ್ನೊಂದಿಗಿವೆ. ಅವರು ನನಗೆ ಪರಿಪೂರ್ಣ ಸೂಚನೆಗಳು ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಅವರು ಎಲ್ಲರಿಗೂ ಲಭ್ಯವಿದ್ದಾರೆ. ಏಕಾಂಗಿಯಾಗಿ ಕುಳಿತುಕೊಳ್ಳುವ ಅಭ್ಯಾಸ ಬೆಳೆಸಿಕೊಂಡು ಅವರೊಡನೆ ಮಾತನಾಡುವ ಪ್ರಯತ್ನ ಮಾಡಬೇಕು. ಇದು ಸಾಧ್ಯವಿದೆ.

ಜ್ಞಾನ ಒಂದು ಶಕ್ತಿ ಎಂದು ನಾವು ಹೇಳುತ್ತೇವೆ. ಜ್ಞಾನ ವಿವೇಕವಲ್ಲ. ನನಗೆ ಗೋಚರಿಸಿದ ಒಂದು ಹೊಸ ಅಂಶವೆಂದರೆ–ಪ್ರೀತಿಯು ಜ್ಞಾನವನ್ನು ವಿವೇಕವನ್ನಾಗಿಸುತ್ತದೆ. ನಿಮಗೆ ಬಲವಾದ ಗಾಢ ಪ್ರೀತಿ ಇದ್ದರೆ, ಅದು ನಕಾರಾತ್ಮಕ ಅಂಶಗಳನ್ನು ಕೂಡಾ ವಿವೇಕವಾಗಿ ಮಾರ್ಪಡಿಸುತ್ತದೆ. ಹೀಗೆಯೇ ಪರಿವರ್ತನೆ ಆಗುವುದು. ಆದ್ದರಿಂದ ಪ್ರೀತಿಯೇ ನಿಮ್ಮ ಗುರುವಾಗಬಹುದು. ಪರೀಕ್ಷೆ ಮಾಡಿ ಮತ್ತು ಇಂದಿನಿಂದ ಆರಂಭಿಸಿ, ಪ್ರತಿಯೊಂದು ಕ್ಷಣವೂ ಮಹತ್ತರವಾದ ಪ್ರೀತಿಯನ್ನು ಹೊಂದಿ ಜೀವಿಸಿ. ಪ್ರೀತಿ ಸಮೃದ್ಧಿಯನ್ನು ತರುತ್ತದೆ. ಪ್ರೀತಿ ನಮ್ಮೆಲ್ಲರ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಸಹಜವಾಗಿ, ಈ ಭೂಮಿಯ ಮೇಲೆ ಅನೇಕ ಆಧ್ಯಾತ್ಮಿಕ ಗುಂಪುಗಳಿವೆ. ಕೆಲವು ಗುಂಪುಗಳು ಚಿಕ್ಕವು, ಗುರು ಸತ್ತನಂತರ ಕೆಲವು ಗುಂಪು ಚೆದುರಿ ಹೋಗುವುದೊಂದು ದುರಂತ. ಅವರು ಬೇರೆ ಗುಂಪುಗಳಿಗೆ ಸೇರಿಕೊಳ್ಳುತ್ತಾರೆ ಮತ್ತು ಗುರುವನ್ನು ಮರೆತುಬಿಡುತ್ತಾರೆ. ಆದರೆ ಕೆಲವು ಗುರುಗಳಿಗೆ ಹೆಚ್ಚಿನ ಸಂಖ್ಯೆಯ ಅನುಯಾಯಿಗಳು ಇರುತ್ತಾರೆ. ಗುರುವಿನ ಸಾವಿನ ನಂತರ ಅವನ ಅನುಯಾಯಿಗಳು ಆ ಗುರುವಿನ ಬೋಧನೆಗಳನ್ನು ಎಲ್ಲ ಕಡೆ ಹರಡುತ್ತಾರೆ. ಆ ಗುರು ಅವರ ಮೂಲಕ ಬದುಕುತ್ತಾನೆ. ತನ್ನ ಬೋಧನೆಗಳನ್ನು ಹೊಂದಿರುವ ಚೈತನ್ಯಗಳನ್ನು ಗುರು ಬಿಟ್ಟು ಹೋಗುತ್ತಾನೆ. ಇವು ನೂರಾರು ವರ್ಷಗಳವರೆಗೆ ಇರುತ್ತವೆ. ಗುರು ಬೇರೆ ಗ್ಯಾಲಕ್ಸಿ ಅಥವಾ ಭೂಮಿಯಲ್ಲಿ ಇದ್ದರೂ, ನೀವು ಈ ಚೈತನ್ಯಗಳಿಂದ ಒಂದು

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಆಕಾರವನ್ನು ಆವಾಹಿಸಿದರೆ, ಅದು ಸಾಕಾರಗೊಂಡು ನಿಮ್ಮನ್ನು ಮಾರ್ಗದರ್ಶಿಸುವುದು.

ಸಾಮಾನ್ಯವಾಗಿ ಒಬ್ಬ ಗುರು ಸತ್ತಾಗ, ಅವನ ಚೈತನ್ಯಗಳು ಹೊಂದಿರುವ ಪ್ರೀತಿ ಮತ್ತು ಜ್ಞಾನ ಅನೇಕ ಅನುಯಾಯಿಗಳು ಬರುವಂತೆ ಮಾಡುತ್ತದೆ ಮತ್ತು ಅವರ ಸಂಖ್ಯೆ ಹೆಚ್ಚುತ್ತದೆ. ಗುರುವಿಗೆ ಮಾತ್ರ ತಿಳಿದಿರುತ್ತದೆ ತನ್ನ ಶಿಷ್ಯರ ಮೇಲೆ ಎಷ್ಟು ಪ್ರೀತಿಯಿದೆ ಎಂಬುದು. ಒಬ್ಬ ಗುರು ತನ್ನ ದೇಹದಲ್ಲಿರಲಿ ಅಥವಾ ದೇಹ ತೊರೆದಿರಲಿ ಅವನು ಮೇಲ್ವಿಚಾರಣೆಯನ್ನು ಮುಂದುವರಿಸುತ್ತಾನೆ. ಇದಲ್ಲದೆ ನನ್ನ ಗುರು ಅಮರರಂಥ, ಬೇರೆ ರೀತಿಯ ಗುರುಗಳೂ ಇದ್ದಾರೆ. ಪುರಾಣಗಳಲ್ಲಿ ಅವರ ಹೆಸರುಗಳು ಅಚ್ಚೊತ್ತಿವೆ. ಅವರು ನಮ್ಮನ್ನು ಭೇಟಿ ಮಾಡುವುದನ್ನು ಮುಂದುವರಿಸುತ್ತಾರೆ, ನಮ್ಮ ಆಧ್ಯಾತ್ಮಿಕ ಬೆಳವಣಿಗೆಯನ್ನು ಮೇಲ್ವಿಚಾರಿಸುತ್ತಾರೆ, ನಮಗೆ ಲಕ್ಷಾಂತರ ವರ್ಷಗಳವರೆಗೆ ಸಹಾಯ ಮಾಡುತ್ತಾರೆ ಮತ್ತು ಮಾರ್ಗದರ್ಶಿಸುತ್ತಾರೆ. 'ಅಮರ' ಅತ್ಯಂತ ಸೂಕ್ತ ಹೆಸರು. ಎಲ್ಲ ಋಷಿಗಳೂ ಅಮರರು.

ನನ್ನ ಜೊತೆ ಇರುವ ಜನರು ನನಗಿಂತ ಪ್ರತಿಭಾವಂತರೆಂದು ಹೇಳಲು ನಾನು ಹರ್ಷಪಡುತ್ತೇನೆ. ಅವರ ಕಾರಣದಿಂದ ಇಂತಹ ಕಟ್ಟಡಗಳನ್ನು ಹೊಂದಿದ್ದೇವೆ. ನಮಗೆ ವೆಬ್‌ಕಾಸ್ಟ್ ಮಾಡಲು ಸಾಧ್ಯವಾಗಿದೆ. ಗುರು ಏನನ್ನೂ ನಿರೀಕ್ಷಿಸುವುದಿಲ್ಲ. ಆದರೆ ನೀವು ಬೆಳೆಯಬೇಕಾಗಿದೆ– ನಿಧಾನ ಅಥವಾ ವೇಗ, ಚಿಂತೆಯಿಲ್ಲ. ಅದೇ ಗುರುದಕ್ಷಿಣೆ. ಅದು ಒಂದು ಹಾದಿಯನ್ನು ಪ್ರವೇಶಿಸಿ, ವಾಹನದಲ್ಲಿ ಕುಳಿತುಕೊಂಡಂತೆ. ಗುರು ನಿಮ್ಮನ್ನು ಕ್ಷೇಮವಾಗಿ ಉದ್ದಿಷ್ಟ ನೆಲೆಗೆ ಕರೆದೊಯ್ಯುವ ಒಂದು ವಾಹನ. ಗುರುವಿನ ಜೊತೆಗೂಡಿ, ಅಷ್ಟು ಸಾಕು. ಪ್ರೀತಿ ಮತ್ತು ಧ್ಯಾನ ಬೇರೆಯಲ್ಲ. ನೀವು ದೇವರನ್ನು ಪ್ರೀತಿಸಬೇಕು, ನಿಮ್ಮ ಗುರುವನ್ನು ಪ್ರೀತಿಸಬೇಕು, ನಿಮ್ಮನ್ನು ನೀವು ಪ್ರೀತಿಸಬೇಕು. ನಿಮ್ಮನ್ನು ನೀವು ಪ್ರೀತಿಸಿದಾಗ ಧ್ಯಾನದ ಗುಣಮಟ್ಟ ಬದಲಾಗುತ್ತದೆ. ಗುರು ನಿಮ್ಮನ್ನು ಮುಂಬರುವ ಎಲ್ಲ ಜನ್ಮಗಳಲ್ಲಿಯೂ ಪ್ರೀತಿಸುತ್ತಾರೆ. 'ನಾನು ಇನ್ನೊಬ್ಬರಲ್ಲಿಗೆ ಹೋಗಬೇಕು' ಎಂದು ನೀವು ಹೇಳುವವರೆಗೆ ಅವರು ನಿಮ್ಮನ್ನು ರಕ್ಷಿಸುತ್ತಾರೆ.

ನೀವು ಗುರುವನ್ನು ಅರ್ಥ ಮಾಡಿಕೊಳ್ಳಬೇಕು, ಅವರ ವ್ಯಕ್ತಿತ್ವವನ್ನು ಕೂಡಾ. ಅವರ ಬೋಧನೆಗಳನ್ನು ಅರ್ಥಮಾಡಿಕೊಳ್ಳಿ ಮತ್ತು ನಿಮ್ಮ ಜೀವನಕ್ಕೆ ಅನಾನುಕೂಲವಾಗದಂತೆ ಅವರ ಬೋಧನೆಗಳನ್ನು ಹರಡಿ. ಯಾವುದೇ ಷರತ್ತು ಅಥವಾ ನಿರೀಕ್ಷೆಯಿಲ್ಲದೆ ಬೆಳಕನ್ನು ಹರಡಿ.

ಸಾಮಾನ್ಯವಾಗಿ ಜನರು, ಅದರಲ್ಲಿಯೂ ವಯಸ್ಸಾದಂತೆ ಸಾವಿನ ಬಗ್ಗೆ ಮಾತನಾಡುವುದಿಲ್ಲ. ಜನನವಿರುವ ಹಾಗೆಯೇ ಸಾವು ಇರುತ್ತದೆ. ಸತ್ತ ಮೇಲೆ ಕೂಡಾ ನಮ್ಮಲ್ಲಿರುವ ಆಳವಾದ ಸಂಪರ್ಕಗಳು ಕಡಿದು ಹೋಗುವುದಿಲ್ಲ. ನಾನು ಈ ಹಿಂದೆ ಅನೇಕ ಸಲ ಹೇಳಿದ್ದೇನೆ, ನಾವು ಹಿಂದಿನ ಜನ್ಮದಲ್ಲಿ ಭೇಟಿಯಾಗಿದ್ದೆವು ಮತ್ತು ನಾವು ಪುನಃ ಭೇಟಿಯಾಗುವ ಭರವಸೆಯಿದೆ.

ಒಮ್ಮೆ ನಾವು ದೇಹವನ್ನು ಬಿಟ್ಟ ನಂತರ ನಮ್ಮ ಆಯಾಮಗಳು ವಿಸ್ತಾರವಾಗುತ್ತವೆ. ಸೂಕ್ಷ್ಮಲೋಕದಿಂದ ನಾವು ಹೆಚ್ಚು ನೋಡುತ್ತೇವೆ. ನಾವು ಹೆಚ್ಚಿನ ವಿಷಯ ತಿಳಿದುಕೊಳ್ಳುತ್ತೇವೆ. ನಾವು ಹೆಚ್ಚು ಅರ್ಥ ಮಾಡಿಕೊಳ್ಳುತ್ತೇವೆ. ಯಾವುದೇ ವಿಷಯದ ಬಗ್ಗೆ, ಸಾವಿನ ಬಗ್ಗೆ ಕೂಡಾ ತಿಳಿದುಕೊಳ್ಳುತ್ತೇವೆ. ಕೆಲವರು ತಮ್ಮ ಜೀವಮಾನವನ್ನು ವ್ಯರ್ಥವಾಗಿ ಕಳೆದ ಬಗ್ಗೆ ಪಶ್ಚಾತ್ತಾಪ ಪಡುತ್ತಾರೆ. ಮತ್ತೆ ಜನ್ಮ ತಳೆದಾಗ ಅವರು ಬಯಸಿದ ರೀತಿಯಲ್ಲಿ ಬದುಕಲು ಪುನಃ ಅವಕಾಶಗಳನ್ನು ಕೊಡಲಾಗುವುದು. ನಮ್ಮ ಕರ್ಮದ ದಾಖಲೆಗಳ ಪ್ರಕಾರ ಜೀವನಪಥವನ್ನು ಆಯ್ಕೆ ಮಾಡಲಾಗುವುದು. ಕರ್ಮಗಳ ನಿಯಮಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಋಷಿಗಳು ಹೇಳುತ್ತಿದ್ದಾರೆ. ಇದು ಹೊಸದಾಗಿ ನಾವು ಪಡೆದಿರುವ ಜ್ಞಾನ. ವ್ಯಕ್ತಿ ಒಂದು ನಿರ್ದಿಷ್ಟ ಪಥದಲ್ಲಿ ಚಲಿಸಬೇಕು, ಆದರೆ ಅವನು ಒಂದು ಉನ್ನತ ಪಥದಲ್ಲಿ ಚಲಿಸಲು ಬಯಸುತ್ತಾನೆ. ಅದಕ್ಕೆ ಅವನು ಅರ್ಹನಾಗಿರುವುದಿಲ್ಲ, ಕಾರಣ ಅವನು ಮಾಡಿದ ತಪ್ಪು. ಕೆಟ್ಟ ಕರ್ಮದ ಪರಿಣಾಮವನ್ನು ಅವನು ಅನುಭವಿಸಬೇಕಾಗುತ್ತದೆ. ಆದರೆ ದೇವರು ಕರುಣಾಮಯಿ. ಒಮ್ಮೆ ಆ ವ್ಯಕ್ತಿ ಹೆಚ್ಚು ಧ್ಯಾನ ಮಾಡಿದರೆ, ಹೆಚ್ಚು ಅರ್ಥ ಮಾಡಿಕೊಂಡರೆ ಅವನು ಕೂಡಲೆ ಋಷಿಗಳ ಬಳಿಗೆ ಹೋಗಿ, ಕೆಲಸಕ್ಕಾಗಿ ಪ್ರಾರ್ಥಿಸುತ್ತಾನೆ. ಹೀಗೆ ಒಂದು ಪಥವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಕೂಡ ಅನೇಕ ಲಾಭಗಳಿವೆ.

ಆಧ್ಯಾತ್ಮಿಕ ಮಾರ್ಗದಲ್ಲಿರುವ ಒಬ್ಬ ಪ್ರಾಮಾಣಿಕ ಮತ್ತು ಸತ್ಯವಂತ ಮನುಷ್ಯ ಜೀವನದ ಆಧ್ಯಾತ್ಮಿಕ ಮತ್ತು ಲೌಕಿಕ ಭಾಗಗಳನ್ನು ನಿಭಾಯಿಸಲು ಬಹುಶಃ ಕಷ್ಟಪಡುತ್ತಾನೆ. ಬೆಳಕನ್ನು ಹೊಂದಿರಿ, ಬೆಳಕು ಈ ದಿನದ ಸೂತ್ರ ತಿಳಿಸುತ್ತದೆ. ನಾಳೆಯ ಸೂತ್ರ ಬೇರೆಯಾಗಿರಬಹುದು. ನೀವು ಉನ್ನತ ಆಯಾಮವನ್ನು ಪ್ರವೇಶಿಸಲು ಪ್ರಯತ್ನಿಸುವಾಗ ಮತ್ತು ಅಲ್ಲಿ ಸಾಧನೆ ಮಾಡುವಾಗ, ಸಂಘರ್ಷಗಳು–ಹೋರಾಟಗಳು ಉಂಟಾಗುತ್ತವೆ. ಅವನ್ನು ನಿಭಾಯಿಸಬಹುದು, ಏಕೆಂದರೆ ನೀವು ಆಧ್ಯಾತ್ಮಿಕ ಬುದ್ಧಿಶಕ್ತಿ ಹೊಂದಿರುತ್ತೀರಿ. ಧ್ಯಾನದಲ್ಲಿ ಮುಂದುವರೆದಂತೆ ನೀವು ಇನ್ನೂ ಉನ್ನತ ಆಯಾಮವನ್ನು ಮುಟ್ಟುವಿರಿ, ಅದು ಆಧ್ಯಾತ್ಮಿಕ ಆಯಾಮ ಎರಡು. ಆಗ ನಿಮಗೆ ಹೊಸ ಸಂಘರ್ಷಗಳು ಎದುರಾಗುತ್ತವೆ. ನಿಮಗೆ ಯಾವುದೇ ಸಂಘರ್ಷ ಎದುರಾದರೆ ನನ್ನ ಬಳಿಗೆ ಬನ್ನಿ. ಇದೇ ರೀತಿ ನೀವು ಮುಂದುವರಿದಂತೆ, ಉನ್ನತ ಆಯಾಮಗಳಿಗೆ ನಡೆದಂತೆ ನಿಮ್ಮ ಕುಟುಂಬಕ್ಕೆ ತೊಂದರೆಯಾಗದಂತೆ ಎಲ್ಲಾ ಆಯಾಮಗಳೊಂದಿಗೆ ಸರಿಯಾಗಿ ವ್ಯವಹರಿಸಿ ಸಂತೋಷವಾಗಿ ಬಾಳಬೇಕು. ಭವಿಷ್ಯದಲ್ಲಿ ಹೊಸ ಬದಲಾವಣೆಗಳು ಪ್ರಕ್ಷುಬ್ಧತೆಗಳು ಉಂಟಾಗುತ್ತವೆ. ಅದೊಂದು ಅವಕಾಶ. ನೀವು ಪ್ರೀತಿಯನ್ನು ಹೊಂದಿದ್ದರೆ, ಒಳ್ಳೆಯತನ, ಪ್ರಾಮಾಣಿಕತೆ, ಶಾಂತಿ ಇತ್ಯಾದಿ ನಿಮ್ಮೊಳಗೆ ಇದ್ದರೆ, ಯಾವುದೇ ಸಮಸ್ಯೆಯನ್ನು ಪರಿಹರಿಸಬಹುದು. ಪ್ರಜ್ಞಾಪೂರ್ವಕವಾಗಿ ಒಂದೂ ತಪ್ಪನ್ನು ಮಾಡದೆ ಶಾಂತಿಯಿಂದ ಸರಿಯಾದ ರೀತಿಯಲ್ಲಿ ಬಾಳೋಣ. ಒಮ್ಮೆ ನಿಮ್ಮ ತಪ್ಪು ಅರಿವಾದರೆ ಮತ್ತೆ ಎಂದಿಗೂ ಆ ತಪ್ಪನ್ನು ಪುನರಾವರ್ತಿಸಬೇಡಿ. ಕ್ರಿಸ್ತನು ಕಲಿಸಿದ ಪ್ರೀತಿಯನ್ನು ಯಾವಾಗಲೂ ಹೊಂದಿರಿ. ಇನ್ನು ಕೆಲವು ತಿಂಗಳಲ್ಲಿ ನಾವು ಆಧ್ಯಾತ್ಮಿಕವಾಗಿ ಶೋಧಕ್ಕೊಳಪಡುತ್ತೇವೆ.

ಡಿಸೆಂಬರ್ 2012ನ್ನು ಎದುರಿಸಲು ಮತ್ತು ಅದರಿಂದ ಪಾರಾಗಲು ನಾನು ಕಾರ್ಯ ಯೋಜನೆಯೊಂದನ್ನು ಕೊಟ್ಟಿದ್ದೆ. ಈ ದಿನ ಒಂದು ಹೊಸ ಅತ್ಯಂತ ಶಕ್ತಿಯುತ ತಂತ್ರವನ್ನು ಕೊಡುತ್ತೇನೆ. ಯಾವ ದಿಕ್ಕಿಗಾದರೂ ಸರಿ ಕುಳಿತುಕೊಳ್ಳಿ, ನೀವು ಮಲಗಿಯೂ ಅಭ್ಯಾಸ ಮಾಡಬಹುದು. ಕಣ್ಣುಗಳನ್ನು ಮುಚ್ಚಿ ವಿಶ್ರಮಿಸಿಕೊಳ್ಳಿ. ಸೂರ್ಯನ ಮಧ್ಯದಲ್ಲಿ ನೀವು ಇದ್ದೀರೆಂದು ಊಹಿಸಿಕೊಳ್ಳಿ ಮತ್ತು ಎಲ್ಲ ಕಡೆಗಳಿಂದ ಪ್ರಕಾಶಮಾನವಾದ ನೀಲಿ ಬೆಳಕು ನಿಮ್ಮ ಕಡೆಗೆ ಬರುತ್ತದೆ. ಅದನ್ನು ಹೀರಿಕೊಳ್ಳಿ. ಸೂರ್ಯನನ್ನು ಕುರಿತು, 'ನನ್ನ ದೇಹ, ಮನಸ್ಸು, ಬುದ್ಧಿಗಳನ್ನು ಪರಿಶುದ್ಧಗೊಳಿಸು, ನನ್ನನ್ನು ನಿನ್ನಂತೆ ಪರಿಶುದ್ಧನನ್ನಾಗಿ ಮಾಡು' ಎಂದು ಪ್ರಾರ್ಥಿಸಿ. ಅಷ್ಟು ಸಾಕು. ನೀವು ಪರಿಶುದ್ಧರಾದರೆ ನಿಮ್ಮಲ್ಲಿ ಮಹತ್ತರ ಪ್ರೀತಿಯನ್ನು ಯಾವಾಗಲೂ ಹೊಂದಿರುವಿರಿ. ದೇಹ ಆರೋಗ್ಯವಾಗಿರುತ್ತದೆ, ನಿಮ್ಮ ಮನಸ್ಸು ನಿರ್ಮಲವಾದ ಭಾವೋದ್ವೇಗಗಳನ್ನು ತರುತ್ತದೆ ಮತ್ತು ಬುದ್ಧಿ ಅದ್ಭುತವಾದ ಆಲೋಚನೆಗಳನ್ನು ಹುಟ್ಟಿಸುತ್ತದೆ. ನೀವು ದಿನದ ಯಾವುದೇ ಸಮಯದಲ್ಲಿ ಕನಿಷ್ಠ 7 ನಿಮಿಷಗಳವರೆಗೆ ಅಭ್ಯಾಸ ಮಾಡಿ. ನೀವು ಇನ್ನೂ ಹೆಚ್ಚು ಹೊತ್ತು, ಅರ್ಧ ಘಂಟೆ, ಒಂದು ಘಂಟೆಯ ಕಾಲ ಅಭ್ಯಸಿಸಬಹುದು. ಇದು ಬೆಳಕಿನ ದೇಹವಾಗಲು ಮೊದಲ ಹೆಜ್ಜೆ. ಇದು ಅಮರರವರಿಂದ ಬಂದ ಉಡುಗೊರೆ. ನೀವು ಇದನ್ನು ಯಾರಿಗಾದರೂ ತಿಳಿಸಬಹುದು. ಆದರೆ ನಿಮ್ಮ ವಿವೇಚನೆಯನ್ನು ಉಪಯೋಗಿಸಿ.

ನಾನು ನನ್ನ ಕೆಲಸವನ್ನು ಪುನರ್ವ್ಯವಸ್ಥೆಗೊಳಿಸುತ್ತಿದ್ದೇನೆ. ಡಿಸೆಂಬರ್‌ಗೆ ಸಂಬಂಧಿಸಿದಂತೆ ಬಹಳ ಕೆಲಸಗಳನ್ನು ಪೂರೈಸಬೇಕಾಗಿದೆ. ಇನ್ನು ಮುಂದೆ ಎಲ್ಲ ಇ–ಮೇಲ್‌ಗಳನ್ನು ನನ್ನ ಪರವಾಗಿ ಜಯಂತ್ ಉತ್ತರಿಸುತ್ತಾರೆ. ನಾನು ಅವುಗಳನ್ನು ವೈಯಕ್ತಿಕವಾಗಿ ಅವರ ಮೂಲಕ ವ್ಯವಹರಿಸುತ್ತೇನೆ.

ನಾವು ಐದು ಪುಸ್ತಕಗಳನ್ನು ಬಿಡುಗಡೆ ಮಾಡಿದೆವು. ಒಂದು ಪುಸ್ತಕ ಪಿರಮಿಡ್‌ಗಳ ಬಗ್ಗೆ ಅಪರೂಪದ ಮಾಹಿತಿಯನ್ನು ಒಳಗೊಂಡಿದೆ. ಎಲ್ಲ ಪಿರಮಿಡ್‌ಗಳು ಅಂತರ್–ಸಂಪರ್ಕ ಹೊಂದಿವೆ ಎಂಬಂತಹ ಹೊಸ ಅಂಶಗಳನ್ನು ಈ ಪುಸ್ತಕ ಹೊಂದಿದೆ. ಅರ್ಥ ಮಾಡಿಕೊಳ್ಳಿ ಮತ್ತು ಸಂತೋಷಪಡಿ.ಅಭಿಲಾಷಿತ ಅವರು ಗೀಜ ಪಿರಮಿಡ್‌ಗೆ ಸೂಕ್ಷ್ಮ ಪ್ರಯಾಣ ಮಾಡಿ, ಅಲ್ಲಿ ಕುಳಿತು ಪಿರಮಿಡ್‌ನೊಂದಿಗೆ ಮಾತನಾಡುವಂತೆ ಅವರಿಗೆ ಹೇಳಲಾಯಿತು. ಆಕೆಗೆ ಅದು ಸಾಧ್ಯವಾಯಿತು! ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/-), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/-) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

* ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
* ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
* ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
* ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
* ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

* ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
* ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
* ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
* ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
* ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

# 'ಬೆಳಕಿನಿಂದ ಕ್ರಾಂತಿ' ಬ್ಲಾಗ್ ಓದುಗರ ಪ್ರತಿಕ್ರಿಯೆ

### "ದೇವರ ಕೊಡುಗೆಗಳೇನು?" – ಶೀರ್ಷಿಕೆಯ ಪೋಸ್ಟ್ ಬಗ್ಗೆ

ಎಲ್ಲವೂ, ಎಲ್ಲವೂ, ನಿಜವಾಗಿಯೂ..... ಎಲ್ಲವೂ!

– ಬೆವರ್ಲಿ ಪೆನ್ನೆಲ್, ಅಟ್ಲಾಂಟಾ, ಜಾರ್ಜಿಯಾ; ಫೇಸ್‌ಬುಕ್‌ನಲ್ಲಿ

ಒಳ್ಳೆಯದಾದುದೆಲ್ಲವೂ ದೇವರಿಂದ ಬರುತ್ತದೆ, ಅದರಲ್ಲೂ ವಿಶೇಷವಾಗಿ ಅವನ ಪ್ರತಿರೂಪದಲ್ಲಿ ಸೃಷ್ಟಿಯಾಗಿರುವ ನಾವುಗಳು.

– ಲಿಂಡ ರೆನ್ನಿಂಗರ್, ಎರೀ, ಪೆನ್ಸಿಲ್ವೇನಿಯಾ; ಫೇಸ್‌ಬುಕ್‌ನಲ್ಲಿ

ಗುರೂಜಿಯವರು ಅತ್ಯದ್ಭುತರಾದ ಶಿಕ್ಷಕರು! ಎಂಥ ಆಪ್ಯಾಯಮಾನವಾದ ಮತ್ತು ಅನುಕಂಪವುಳ್ಳ ಶಿಕ್ಷಕರು! "ಪ್ರತಿಯೊಂದೂ ದೇವರ ಕೊಡುಗೆ!" ಹೌದು!! ಇದನ್ನು ನಮ್ಮೊಂದಿಗೆ ಹಂಚಿಕೊಂಡದ್ದಕ್ಕಾಗಿ ನಿಮಗೆ ಧನ್ಯವಾದಗಳು. ದಿನವನ್ನು ಪ್ರಾರಂಭಿಸಲು ಇದೊಂದು ಸುಂದರವಾದ ಹಾದಿ.

ನಮ್ಮ ಅಮೂಲ್ಯವಾದ ಭೂಮಿಗೆ ನಾವು ಪ್ರತಿದಿನ ಎಷ್ಟು ಬೆಳಕನ್ನು ತರಲು ಸಾಧ್ಯವೋ ಅಷ್ಟೆಲ್ಲವೂ ಬೇಕಾಗಿದೆ! ಈ ತಂತ್ರ ನನಗೆ ಇಷ್ಟವಾಗಿದೆ ಮತ್ತು ಪ್ರತಿದಿನವೂ ಪ್ರಪಂಚದ ಹೀಲಿಂಗ್‌ಗಾಗಿ ಇದನ್ನು ಉಪಯೋಗಿಸುತ್ತೇನೆ.

– ರೋಸ್ ವಿನ್‌ಸ್ಟಾನ್ಲೀ-ಟ್ರೆಪ್ಜ್; ಫೇಸ್‌ಬುಕ್‌ನಲ್ಲಿ

### "ದೇವರು ದುಷ್ಟತೆಗೆ ಏಕೆ ಅವಕಾಶ ಕೊಟ್ಟ?" – ಶೀರ್ಷಿಕೆಯ ಪೋಸ್ಟ್ ಬಗ್ಗೆ

ದುಷ್ಟತೆಗೆ ಅವಕಾಶ ಮಾಡಿಕೊಡುವುದು ನಾವೇ.

– ಕ್ರಿಸ್ ಮಛೆಲ್; ಫೇಸ್‌ಬುಕ್‌ನಲ್ಲಿ

ದೇವರು ದುಷ್ಟತೆಗೆ ಅವಕಾಶ ಕೊಡುವುದಿಲ್ಲ. ದುಷ್ಟತೆ ಸಂಭವಿಸಲು ಇಚ್ಛಾಸ್ವಾತಂತ್ರ್ಯ ಅವಕಾಶ ಮಾಡಿಕೊಡುತ್ತದೆ. ದೇವರು ಪ್ರೀತಿ ಮಾತ್ರ. ಪ್ರೀತಿಯಲ್ಲಿ ಎಲ್ಲರೂ ಮೇಲೇರಿದಾಗ ದುಷ್ಟತೆಯನ್ನು ಮೆಟ್ಟಬಹುದು.

– ಟೆರ್ರಿ ಮೇರಿ ಕಾಂಟ್; ಫೇಸ್‌ಬುಕ್‌ನಲ್ಲಿ

ಒಂದನ್ನು ಬಿಟ್ಟು ಇನ್ನೊಂದು ಇರಲಾರದು ಎಂದು ತಿಳಿದಾಗ ದ್ವಂದ್ವ ಇರುವುದಿಲ್ಲ. ಆದ್ದರಿಂದ ನಮ್ಮ ಪ್ರಸಕ್ತ ವಿನ್ಯಾಸದಿಂದಾಚೆ ಹೋಗುವುದಕ್ಕಾಗಿ ದ್ವಂದ್ವವನ್ನು ಮೀರುವುದೇ ನಮ್ಮ ಜೀವನದ ಗುರಿಯಾಗಬೇಕು.

– ಲ್ಯಾರಿ ಡಾಲ್ಟನ್; ಫೇಸ್‌ಬುಕ್‌ನಲ್ಲಿ

ಖಚಿತವಾಗಿ, ಜೀವನ ಇರುವುದು ಅನುಭವಕ್ಕಾಗಿ. ನಮಗೆ ಒಳ್ಳೆಯದು ಮತ್ತು ಕೆಟ್ಟದ್ದು, ಸಕಾರಾತ್ಮಕ ಮತ್ತು ನಕಾರಾತ್ಮಕ, ಇವುಗಳಲ್ಲಿ ಯಾವುದನ್ನಾದರೂ ಆಯ್ಕೆಮಾಡಿಕೊಳ್ಳುವ ಸಾಮರ್ಥ್ಯವನ್ನು ನೀಡಲಾಗಿದೆ. ಈ ಆಯ್ಕೆ, ಅನುಭವಕ್ಕೆ ಆಟದ ಮೈದಾನವಿದ್ದಂತೆ.

– ಜಾನ್ ಸ್ವೆಕ್ಟರ್; ಫೇಸ್‌ಬುಕ್‌ನಲ್ಲಿ

ದುಷ್ಟತೆ ಇಲ್ಲದಿದ್ದರೆ ಒಳ್ಳೆಯದನ್ನು ಅಳೆಯುವುದು ಹೇಗೆ?

– ರೇ ಆ್ಯಂಡರ್ಸನ್; ಫೇಸ್‌ಬುಕ್‌ನಲ್ಲಿ

ನಾವು ನಿಜವಾಗಿಯೂ ನಮ್ಮ ಜೀವನದ ಘಟನೆಗಳನ್ನು ಗಮನಿಸಿದರೆ, ಕಷ್ಟಕರ, ಕರಾಳ, ತ್ರಾಸದಾಯಕ ಘಟನೆಗಳು ನಮ್ಮನ್ನು ಬಲಿಷ್ಠರನ್ನಾಗಿಸಿವೆ ಮತ್ತು ನಮ್ಮ ನಡತೆಯನ್ನು ನಯಗೊಳಿಸಿವೆ.

– ಡೆಲ್ಫಿನ್ ಪಿಲರ್; ಫೇಸ್‌ಬುಕ್‌ನಲ್ಲಿ

ನಾವೆಲ್ಲರೂ ದೇವರ ಕಿಡಿಗಳು. ಈ ಭೂಮಿ ಒಂದು ಶಾಲೆ ಹಾಗೂ ಒಳಿತು-ಕೆಡುಕುಗಳನ್ನು ಬದುಕಿ ನಾವು ಪಾಠ ಕಲಿಯುತ್ತೇವೆ. ನೀವು ಕಷ್ಟದ ಜೀವನವನ್ನು ಹಾದುಬಂದಿದ್ದರೆ, ನೀವು ಬಲಿಷ್ಠರಾಗುವಿರಿ. ನೋವು ಮತ್ತು ದುಃಖಗಳು ನಮಗೆ ಪಾಠ ಕಲಿಸುವುದಕ್ಕಾಗಿಯೇ ಇಲ್ಲಿವೆ.

– ಬಾರ್ಬರ ಜಾನ್ಸ್, ಗೋಲ್ಡ್ ಕೋಸ್ಟ್, ಕ್ವೀನ್ಸ್‌ಲ್ಯಾಂಡ್, ಆಸ್ಟ್ರೇಲಿಯಾ; ಫೇಸ್‌ಬುಕ್‌ನಲ್ಲಿ

ನನ್ನ ಅಭಿಪ್ರಾಯದಲ್ಲಿ ದೇವರೇ ಎಲ್ಲವೂ ಆಗಿದ್ದಾನೆ. ಎಲ್ಲದರ ಸೃಷ್ಟಿಕರ್ತ ದೇವರು.

ಪ್ರೀತಿಯನ್ನು ಒಳಹೊಕ್ಕು ನೋಡುವುದಕ್ಕಾಗಿ ನಾವಿಲ್ಲಿದ್ದೇವೆ. ನಾವು ಪ್ರೀತಿಯನ್ನು ಕಂಡುಕೊಂಡಾಗ, ನಮ್ಮೊಳಗೇ ಅದನ್ನು ಸಂಪರ್ಕಿಸಿದಾಗ, ನಾವು ದೇವರನ್ನು ಕಾಣುತ್ತೇವೆ. ಪ್ರೀತಿಯ ಮುಖಾಂತರ ನಾವು ದೇವರನ್ನು ತಲುಪುತ್ತೇವೆ ಮತ್ತು ದೇವರು ಪ್ರೀತಿಯ ಮುಖಾಂತರ ಮಾತನಾಡುತ್ತಾನೆ. ನಾವು ಪ್ರೀತಿಯ ಸಂಪರ್ಕದಲ್ಲಿ ಇಲ್ಲದಿದ್ದಾಗ, ದೇವರೊಂದಿಗಿನ ಸಂಪರ್ಕಕಡಿತ ನಮಗಾಗುತ್ತದೆ.

– ರ್ಯಾಫೆಲ್ ಮ್ಯಾಬೊ

### "ಸತ್ಸಂಗದ ನಿಜವಾದ ಅರ್ಥವೇನು?" – ಶೀರ್ಷಿಕೆಯ ಪೋಸ್ಟ್ ಬಗ್ಗೆ

ಇದು ಎಷ್ಟೊಂದು ಸತ್ಯ! ಒಂದು ಆಧ್ಯಾತ್ಮಿಕ ಸಮುದಾಯದೊಂದಿಗಿನ ಒಡನಾಟ ಅಪೂರ್ವ ಅನುಭವವನ್ನು ತಂದುಕೊಟ್ಟರೂ ಆಧ್ಯಾತ್ಮಿಕ ಬೆಳವಣಿಗೆಗೆ ಇದು ಯಾವಾಗಲೂ ಬೇಕೆಂದೇನಿಲ್ಲ. ಒಬ್ಬ ಮಾಸ್ಟರ್ ಮತ್ತು ಅವರ ಅನುಯಾಯಿಗಳೊಂದಿಗಿನ ಸಂಬಂಧ, ನಮ್ಮ ಆಂತರ್ಯ-ಪ್ರಯಾಣ ತೆರೆದುಕೊಳ್ಳುತ್ತಿರುವುದನ್ನು ಅರ್ಥ ಮಾಡಿಕೊಳ್ಳಲು ಸಹಕಾರಿ. ಆದಾಗ್ಯೂ ಒಬ್ಬ ವ್ಯಕ್ತಿಯ ಗಮನ ಸ್ಥಳಾಂತರಗೊಳ್ಳಬಹುದು. ಅವನ ಗಮನ ಅಭಿವೃದ್ಧಿ ಮತ್ತು ಅಭ್ಯಾಸಗಳಿಗಿಂತ ಹೆಚ್ಚಾಗಿ ಸಮುದಾಯದ ಸಾಮಾಜಿಕ ವಿಷಯಗಳ ಬಗ್ಗೆ ಹೆಚ್ಚು ಕೇಂದ್ರೀಕೃತವಾಗಬಹುದು. ಏಕಾಂತದಲ್ಲಿ ಸಮಯ ಕಳೆಯುವುದು ಅಂತರ್-ಗಮನ ಬೆಳೆಸಿಕೊಳ್ಳಲು ಸಹಕಾರಿಯಾಗಬಹುದು.

– ಸಿಂಥಿಯಾ ಡಯಾನ್ ಕೆರಿ; ಫೇಸ್‌ಬುಕ್‌ನಲ್ಲಿ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ನನ್ನ ಬದುಕು ಏಕೆ ಗೊಂದಲಮಯವಾಗಿದೆ ? ಅದು ಕರ್ಮಗಳಿಂದಾಗಿಯೇ ?**

ಉ: ನಾವು ನಮ್ಮ ಬದುಕನ್ನು ತಪ್ಪು ಆಯ್ಕೆಗಳಿಂದ, ತಪ್ಪು ಆದ್ಯತೆಗಳಿಂದ ಮತ್ತು ತಪ್ಪು ಗುರಿಗಳಿಂದ ಗೊಂದಲಮಯವಾಗಿಸುತ್ತೇವೆ. ಅದು ಕರ್ಮಗಳಿಂದ ಅಲ್ಲ. ಆಧ್ಯಾತ್ಮಿಕ ದೃಷ್ಟಿಯಿಂದ ಯಾವುದೇ ಚಿಕ್ಕ ತಪ್ಪು, ಅಂದರೆ ಸುಳ್ಳು ಹೇಳುವುದು, ಮೋಸಮಾಡುವುದು, ದಾರಿತಪ್ಪಿಸುವುದು ಮುಂತಾದವು ದೊಡ್ಡ ಗೊಂದಲಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಯಾರನ್ನೂ ದೂಷಿಸಬೇಡಿ. ನೀವೇ ನಿಮ್ಮ ಆತ್ಮವಿಮರ್ಶೆ ಮಾಡಿಕೊಳ್ಳಿ ಎಂಬುದು ನನ್ನ ಸಲಹೆ. ಕೆಟ್ಟ ಕರ್ಮಗಳು ನಾವು ಆಧ್ಯಾತ್ಮದೆಡೆ ತಿರುಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತವೆ ಮತ್ತು ತಪ್ಪು ಆಯ್ಕೆಗಳನ್ನು ಮಾಡಲು ಪ್ರೇರೇಪಿಸುತ್ತವೆ. ಹೆಚ್ಚೆಂದರೆ ಅವು ನಮ್ಮಲ್ಲಿ ಗೊಂದಲವನ್ನು ಉಂಟುಮಾಡಬಹುದು. ಆದರೆ ನಮ್ಮಲ್ಲಿ ನಿಜವಾಗಿಯೂ ಆಧ್ಯಾತ್ಮಿಕವಾಗಿ ಬೆಳೆಯುವ ಉದ್ದೇಶವಿದ್ದರೆ, ಕೆಟ್ಟ ಕರ್ಮಗಳೂ ಸಹಾಯ ಮಾಡುತ್ತವೆ.

**ಪ್ರ: ತಳಮಳವನ್ನು ಹೇಗೆ ಎದುರಿಸುವುದು?**

ಉ: ಒಬ್ಬ ಧ್ಯಾನಿ ತಳಮಳಗೊಳ್ಳುವುದಿಲ್ಲ. ಧ್ಯಾನ ಶಾಂತಿ, ನಿಶ್ಶಬ್ದತೆ ತರುತ್ತದೆ. ಶಂಬಲ ತತ್ವ – 1, 2, 3, ಇವುಗಳಲ್ಲಿ ಯಾವುದಾದರೂ ಒಂದನ್ನು ಅಭ್ಯಾಸ ಮಾಡಿದಾಗ, ಇವು ನಮ್ಮಲ್ಲಿ ಶಾಂತಿ ತರುತ್ತದೆ.

**ಪ್ರ: ನನ್ನ ಆಧ್ಯಾತ್ಮಿಕ ಸಾಧನೆಯಲ್ಲಿ, ನಾನು ನನ್ನ ದೇಹ ಮತ್ತು ಮನಸ್ಸಿನ ಇರುವಿನ ಸಂಪರ್ಕ ಕಡಿದುಕೊಳ್ಳಲು ಯಾವುದಾದರೂ ದಾರಿಯಿದೆಯೇ?**

ಉ: ನೀವು ಆ ತರಹ ಮಾಡಲು ಯಾವುದೇ ದಾರಿಯಿಲ್ಲ. ನಮ್ಮ ಆಧ್ಯಾತ್ಮಿಕ ಸಾಧನೆ ನಮ್ಮ ಇಡೀ ಶರೀರ ವ್ಯವಸ್ಥೆ, ಅಂದರೆ ದೇಹ, ಮನಸ್ಸು ಮತ್ತು ಬುದ್ಧಿಯನ್ನು ಒಳಗೊಂಡಿದೆ. ನಮ್ಮ ದೇಹ, ಮನಸ್ಸು ಮತ್ತು ಬುದ್ಧಿಯು ಶಾಂತವಾದಾಗ ಮಾತ್ರ ನಾವು ಮುಂದುವರೆಯಲು ಹಾಗೂ, ಧ್ಯಾನದಲ್ಲಿ ಮೌನದಂತಹ ಮೊದಲ ಹೆಜ್ಜೆ ಇಡಲು ಸಾಧ್ಯ. ಆದ್ದರಿಂದ ದೇಹ ಮತ್ತು ಮನಸ್ಸನ್ನು ಸಾಧನೆಗೆ ಅಡೆತಡೆಗಳೆಂದು ನೋಡದೆ, ಅವುಗಳನ್ನು ಮಿತ್ರರಂತೆ ನೋಡೋಣ. ನೀವು ಇವುಗಳನ್ನು ಧ್ಯಾನದ ಸಮಯದಲ್ಲಿ ಸಹಕರಿಸಲು ಕೇಳಿಕೊಂಡರೆ, ಅವು ನಮಗೆ ಸಹಾಯ ಮಾಡುತ್ತವೆ.

**ಪ್ರ: ನಾನು ತಪ್ಪಿಸಿಕೊಂಡಿರುವ ಧ್ಯಾನಗಳನ್ನು ಹೇಗೆ ಸರಿದೂಗಿಸಿಕೊಳ್ಳುವುದು?**

ಉ: ನೀವು ಬೇರೆ ದಿನಗಳಲ್ಲಿ, ಅದರಲ್ಲೂ ವಿಶೇಷವಾಗಿ ಹುಣ್ಣಿಮೆ ಅಥವಾ ಅಮಾವಾಸ್ಯೆಯಂದು ಹೆಚ್ಚು ಧ್ಯಾನವನ್ನು ಮಾಡಬೇಕು.

**ಪ್ರ: "ಓಂ ಮಣಿ ಪದ್ಮೇ ಹಂ" ಮಂತ್ರದ ಅರ್ಥವೇನು?**

ಉ: "ಪದ್ಮ" ಅಂದರೆ ಕಮಲ, "ಮಣಿ" ಅಂದರೆ ವಜ್ರ. ಈ ದೇಹ ಒಂದು ಕಮಲದಂತೆ ಮತ್ತು ಆತ್ಮವು ಕಮಲದ ಮಧ್ಯದಲ್ಲಿರುವ ವಜ್ರದಂತೆ. ನಾವು ಈ ಮಂತ್ರವನ್ನು ಪುನರುಚ್ಚರಿಸಿದಾಗ 'ನಾನು ಈ ದೇಹದಲ್ಲಿನ ಆತ್ಮ' ಎಂದು ದೃಢೀಕರಿಸುತ್ತೇವೆ.

**ಪ್ರ: ನಾವು ಅಪಘಾತ ಅಥವಾ ಮರಣಾನಂತರ ನಮ್ಮ ಸೂಕ್ಷ್ಮ ಶರೀರದಲ್ಲಿ ಬದುಕುತ್ತೇವೆಯೇ?**

ಉ: 'ಆತ್ಮದ ಅವರೋಹಣ' ಪುಸ್ತಕವನ್ನು ಓದಿ. ನಾವು ಯಾವಾಗಲೂ ಸೂಕ್ಷ್ಮ ಶರೀರದಲ್ಲಿ ಬದುಕುತ್ತೇವೆ. ಮತ್ತು ಕೆಲವೊಮ್ಮೆ ನಾವು ಇಲ್ಲಿ ಜನ್ಮತಳೆದಾಗ ಭೌತಿಕ ದೇಹವನ್ನು ಪಡೆಯುತ್ತೇವೆ. ಸ್ವಾಭಾವಿಕವಾಗಿ ಅಥವಾ ಅಪಘಾತದಲ್ಲಿ ಮರಣಹೊಂದಿದ ನಂತರ, ನಾವು ನಮ್ಮ ಈ ಭೌತಿಕ ದೇಹದ ಸಂಪರ್ಕ ಕಡಿದುಕೊಂಡು ಸೂಕ್ಷ್ಮ ಶರೀರದಲ್ಲಿ ಬದುಕುತ್ತೇವೆ.

**ಪ್ರ: ಭೂಮಿ ತನ್ನ ಕಕ್ಷೆಯಲ್ಲಿ, ಸೂರ್ಯನ ಸುತ್ತ ತಿರುಗುತ್ತಿರುವಾಗ ದಿಕ್ಕುಗಳು ಹೇಗೆ ಅನ್ವಯಿಸುತ್ತವೆ?**

ಉ: ಭೂಮಿ ತನ್ನ ಕಕ್ಷೆಯಲ್ಲಿ ತಿರುಗುತ್ತಿದ್ದರೂ ಮತ್ತು ಸೂರ್ಯನ ಸುತ್ತ ಪರಿಭ್ರಮಿಸುತ್ತಿದ್ದರೂ, ದಿಕ್ಕುಗಳು ಯಾವಾಗಲೂ ಅನ್ವಯಿಸುತ್ತದೆ.

**ಪ್ರ: ನಾವು ನಮ್ಮ ಪೂಜಾ ಮಂದಿರವನ್ನು ನಿರ್ಮಿಸುವಾಗ ಯಾವ ದಿಕ್ಕನ್ನು ಆರಿಸಬೇಕು?**

ಉ: ಸಾಮಾನ್ಯವಾಗಿ ಉತ್ತರ ಅಥವಾ ಪೂರ್ವ ದಿಕ್ಕನ್ನು ಸೂಚಿಸುತ್ತಾರೆ. ಸಂಪ್ರದಾಯ ಅದನ್ನು ಹೇಳುತ್ತದೆ. ನನ್ನ ತಿಳುವಳಿಕೆಯಂತೆ ದೇವರು ಸರ್ವಾಂತರ್ಯಾಮಿ. ಆದುದರಿಂದ ಯಾವ ದಿಕ್ಕಾದರೂ ಒಳ್ಳೆಯದೇ.

**ಪ್ರ: ಒಂದು ಗುಂಪಾಗಿ ನಾವು ಪ್ರಗತಿ ಸಾಧಿಸಿದ್ದೇವೆಯೇ?**

ಉ: ಹೌದು, ಆದರೆ ಇದು ಸಾಕಾಗುವುದಿಲ್ಲ. ಇದರಿಂದ ನಾನು ತುಂಬಾ ಸಂತೋಷವಾಗಿದ್ದೇನೆ ಎಂದು ಹೇಳುವುದಿಲ್ಲ, ಆದರೆ ನಾನು ಅಸಂತೋಷಿಯೂ ಅಲ್ಲ.

**ಪ್ರ: 'ಹೊಸಯುಗ' ಪ್ರಾರಂಭವಾಗುತ್ತಿದ್ದಂತೆ, ನಾವು ನಮ್ಮ ಹೃದಯದಿಂದ ಕಾರ್ಯನಿರ್ವಹಿಸುತ್ತೇವೆಯೇ ಅಥವಾ ಮನಸ್ಸು ಮತ್ತು ಬುದ್ಧಿಯಿಂದಲೇ?**

ಉ: ನಾವು ಪ್ರೀತಿಯಿಂದ ಮತ್ತು ಬೆಳಕಿನಿಂದ ಕಾರ್ಯನಿರ್ವಹಿಸಬಹುದು. ಸಂಪೂರ್ಣ ಶಾರೀರಿಕ ವ್ಯವಸ್ಥೆ ಈ ಕಾರ್ಯದಲ್ಲಿ ತೊಡಗಿಕೊಳ್ಳುತ್ತದೆ. ನಾವು ಆತ್ಮದ ಮಟ್ಟದಿಂದ ಕಾರ್ಯ ನಿರ್ವಹಿಸೋಣ. ನಮ್ಮ ಅಂತಃಪ್ರಜ್ಞೆಯಿಂದ ಮಾರ್ಗದರ್ಶನ ಪಡೆಯೋಣ, ಆಗ ನೀವು ಈ ಪ್ರಪಂಚದ ಅತ್ಯಂತ ಸುಖೀಪುರುಷರಾಗುತ್ತೀರಿ.


**ಪ್ರ: ಹೊಸಯುಗದವರು ಹೊಸಯುಗದಲ್ಲಿ ಕೇವಲ ಮೂರು ಶತಾಂಶದಷ್ಟು ಮನಸ್ಸನ್ನು ಮಾತ್ರ ಉಪಯೋಗಿಸುತ್ತೇವೆ ಎಂದು ಹೇಳುತ್ತಾರೆ. ಇದು ನಿಜವೇ?**

ಉ: ನನಗೆ ತಿಳಿದಂತೆ ಇದು ನಿಜವಲ್ಲ. ನಿಜವಾಗಿ ನಾವು 100 ಶತಾಂಶ ಮನಸ್ಸನ್ನು ಉಪಯೋಗಿಸುತ್ತೇವೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

ಸಂ : ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಕಳೆದ ಒಂದೂವರೆ ತಿಂಗಳು ನನಗೆ ಅತ್ಯಂತ ಕಷ್ಟದ ಸಮಯವಾಗಿದ್ದು, ವಾರದ ಎಲ್ಲಾ ದಿನಗಳಲ್ಲೂ ಹಗಲು ರಾತ್ರಿ ಕೆಲಸ ಮಾಡಬೇಕಾಗಿತ್ತು. ಆದರೂ ಅದು ನನಗೆ ತೊಂದರೆ ಅನಿಸಲಿಲ್ಲ. ಆ ಸಮಯದಲ್ಲಿ ನನಗೆ ನನ್ನ ಹೊಣೆಗಾರಿಕೆಯನ್ನು ಸಮಯಕ್ಕೆ ಸರಿಯಾಗಿ ಪೂರೈಸುವುದಷ್ಟೇ ಅಲ್ಲದೆ, ಸಾಧನೆಯನ್ನು ಕೂಡ ಮಾಡಲು ಸಾಧ್ಯವಾಯಿತು. ಧ್ಯಾನವು ಸಮಯವನ್ನು ಸಮರ್ಪಕವಾಗಿ ನಿಭಾಯಿಸಲು ಮತ್ತು ಯಾವಾಗ ಯಾವುದಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ತಿಳಿಯಲು ಸಹಕರಿಸುತ್ತಿದ್ದುದು ಒಂದು ಅದ್ಭುತ ಅನುಭವ.

– ಆಕಾಶ್ ಮಲ್ಲಿಕ್

ಧ್ಯಾನಾಭ್ಯಾಸದ ಸಮಯದಲ್ಲಿ ಪ್ರತಿ ಚಕ್ರದಲ್ಲೂ ಒಂದೊಂದು ಪುಟಿಯುತ್ತಿರುವ ಬೆಳಕಿನ ಚೆಂಡು ಕಂಡುಬಂದು, ನಂತರ ಅವೆಲ್ಲವೂ ಒಂದಾಗಿ ಸೇರಿ ಒಂದು ದೊಡ್ಡ ಮೊಟ್ಟೆಯಾಕಾರದ ಬೆಳಕಿನ ಚೆಂಡಾಗುತ್ತದೆ. ಈ ಬಿಳಿ ಮೊಟ್ಟೆಯಾಕಾರದ ಬೆಳಕಿನ ಚೆಂಡಿನ ಮಧ್ಯದಿಂದ ಒಂದು ಕೊಳವೆಯು ನಮ್ಮ ಭೂಮಿಯ ಮೇಲ್ಭಾಗ ಮತ್ತು ಕೆಳಭಾಗವನ್ನು ತಲುಪುತ್ತದೆ. ಧ್ಯಾನದ ಕೊನೆಯಲ್ಲಿ ನಾನಾಗಲೀ ನನ್ನ ದೇಹವಾಗಲೀ ಇಲ್ಲದೆ, ಎಲ್ಲವನ್ನೂ ಹೊಂದಿರುವ ಮತ್ತು ಎಲ್ಲವೂ ಒಂದಾಗಿರುವ ಬಿಳಿಬಣ್ಣದ ಬೆಳಕೇ ಇರುತ್ತದೆ. ಧ್ಯಾನದ ನಂತರ ಇಡೀ ದಿನ ಚೆನ್ನಾಗಿ ಕಳೆಯುತ್ತದೆ. ನನ್ನ ಅರಿವು ವಿಸ್ತಾರವಾದಂತೆ ಅನಿಸುತ್ತದೆ.

– ಕಿರಿಟ್ ಪಟೇಲ್

ಒಣಗಿದ ಬಟ್ಟೆಗಳನ್ನು ತೆಗೆಯುತ್ತಿದ್ದಾಗ, ತಂತಿ ತುಂಡಾಗಿ ಕಬ್ಬಿಣದ ಸರಳು ನನ್ನ ಹಣೆಗೆ ಬಡಿದು, ಅಲ್ಲಿ ಊತ ಬಂದಿತು. ಅಲ್ಲೇ ಕುಳಿತು ನೋವು ನಿವಾರಣೆಗಾಗಿ ಬೆಳಕನ್ನು ಚಾನಲ್ ಮಾಡಿದೆ. ಎರಡು ಗಂಟೆಗಳಲ್ಲಿ ಊತ ಮತ್ತು ನೀಲಿಗಟ್ಟಿದ್ದು ಇಳಿಮುಖವಾಯಿತು. ನನ್ನ ಮಗಳು ಧ್ಯಾನ ಮಾಡುತ್ತಿದ್ದಾಗ, ನಾನು ಇನ್ನೂ ಹೆಚ್ಚು ಗಾಯಗೊಳ್ಳುವುದನ್ನು ತಡೆದದ್ದು ನನ್ನ ರಕ್ಷಾಕವಚ ಎಂದು ತನಗೆ ಹೇಳಿದ್ದಾಗಿ, ಸುಮಾರು ಅದೇ ಸಮಯದಲ್ಲಿ ನನಗೆ ಹೇಳಲು ಕರೆಮಾಡಿದಳು. ನನ್ನನ್ನು ಕಾಪಾಡಿದ ಬೆಳಕು ಮತ್ತು ನನ್ನ ರಕ್ಷಾಕವಚಕ್ಕೆ ನಾನು ಆಭಾರಿಯಾಗಿದ್ದೇನೆ.

– ಶಾಂತ ಅಂಬಾಡಿ

ಜೂನ್ 4ರ ಗ್ರಹಣದ ದಿನದಿಂದ, ನಾನು ಬೆಳಕನ್ನು ಚಾನಲ್ ಅಭ್ಯಸಿಸಿದ ನಂತರ, ಒಂದು ಹೊಸ, ಅದ್ವಿತೀಯವಾದ ಚೈತನ್ಯದ ಅನುಭವವಾಗುತ್ತದೆ. ಬಹುಶಃ ಅಂದು ಒಂದು ಸ್ಥಿತ್ಯಂತರ ಆಗಿರಬಹುದು. ಹೊಸ ಚೈತನ್ಯ ಕಂಪನಗಳಾಗಿ ಹೊರಹೊಮ್ಮುತ್ತದೆ; ಇಡೀ ಪ್ರಪಂಚ ಆ ಕಂಪನಗಳಿಂದ ತುಂಬಿರಬೇಕೆಂಬ ಭಾವನೆ ನನ್ನಲ್ಲಿ ಉಂಟಾಗುತ್ತಿದೆ. ಅದೊಂದು ಅದ್ಭುತ ಅನುಭವ.

– ಜಸ್‌ಪ್ರೀತ್ ಕೌರ್

ಇತ್ತೀಚೆಗೆ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿದ್ದಾಗ ನನ್ನಲ್ಲಿ ಇದ್ದಕ್ಕಿದ್ದಂತೆ ಪ್ರೀತಿಯ ತರಂಗಗಳೆದ್ದು ಇಡೀ ಪ್ರದೇಶವನ್ನು ಆವರಿಸಿದವು. ಆಗ ನಾನು ಎಲ್ಲರೊಡನೆ ಒಂದಾದ ಅನುಭವವಾಯಿತು. ಬಹಳ ಸಂತೋಷವೆನಿಸಿತು ಮತ್ತು ಇಡೀ ದಿನ ಉಲ್ಲಾಸದಿಂದಿದ್ದೆ. ಈ ಅನುಭವವನ್ನು ಕರುಣಿಸಿದ್ದಕ್ಕಾಗಿ ಋಷಿಗಳಿಗೆ ಮತ್ತು ಗುರೂಜಿಯವರಿಗೆ ನನ್ನ ಅನಂತ ನಮಸ್ಕಾರಗಳು.

– ರಶ್ಮಿ ರಘುವಂಶಿ

ಧ್ಯಾನ ಮಾಡುತ್ತಿರುವಾಗ 'ರಾ' ಚೈತನ್ಯಗಳನ್ನು ಅಂತರ್ಗತ ಮಾಡಿಕೊಳ್ಳುವಾಗ ಸ್ವಲ್ಪ ಅಸ್ವಸ್ಥತೆಯುಂಟಾಗುತ್ತಿತ್ತು. ನಾನು 'ರಾ ಬ್ರಹ್ಮ'ನನ್ನು ನನ್ನನ್ನು ಸ್ವೀಕರಿಸುವಂತೆ ಬೇಡಿಕೊಂಡೆ. ಪವಾಡವೋ ಎಂಬಂತೆ, ಎರಡೂವರೆ ಗಂಟೆಗಳ ಅವಧಿಯಿಡೀ ನನ್ನಲ್ಲಿ ಆನಂದದ ಸ್ಥಿತಿ ಇರುತ್ತದೆ. ಯಾವುದೋ ಒಂದು ಉನ್ನತ ಅಸ್ತಿತ್ವದ ಇರುವಿಕೆ ನನಗೆ ಸ್ಪಷ್ಟವಾಗಿ ತಿಳಿಯುತ್ತದೆ. ಈ ಅನುಭವವನ್ನು ಪದಗಳಿಂದ ವ್ಯಕ್ತಪಡಿಸಲಾಗುವುದಿಲ್ಲ. ಇದು ಗುರೂಜಿ, ಋಷಿಗಳು ಮತ್ತು ದೇವರ ಅನುಗ್ರಹದಿಂದಾಗಿ ಆಗಿದೆ. ನಾನು ಅವರಿಗೆಲ್ಲ ಅತ್ಯಂತ ಕೃತಜ್ಞಳಾಗಿದ್ದೇನೆ.

– ಶಾಂತಾಕುಮಾರಿ ಹೆಚ್. ಎಸ್.

ಆಫೀಸಿನಲ್ಲಿ ಕೆಲಸಮಾಡುವಾಗ, ತಕ್ಷಣ ಗುರೂಜಿಯವರ ನೆನಪು ಬಂತು. ಮನೆಗೆ ಬಂದಾಗ, ವಾರ್ತಾಪತ್ರವನ್ನು ನೋಡಿದಾಕ್ಷಣ ಅನಿರ್ವಚನೀಯವಾದ ಆನಂದವಾಯಿತು. ಧ್ಯಾನ ಮುಗಿಸಿದ ನಂತರ ಓದಲೆಂದು ವಾರ್ತಾಪತ್ರವನ್ನು ತೆರೆದೆ. ಯಾರೋ ನನ್ನ ಮೂಲಕ ಚೈತನ್ಯವನ್ನು ಹರಿಸಿದ ಅನುಭವವಾಯಿತು. ಇದು ಕೆಲಕಾಲದವರೆಗೆ ಇತ್ತು. ನಾನು ಹೇಳುವುದೇನೆಂದರೆ, 'ವಾರ್ತಾಪತ್ರವನ್ನು ಮುಟ್ಟಿದರೇ ಚೈತನ್ಯಗಳನ್ನು ಅನುಭವಿಸಲು ಸಾಧ್ಯವಾದರೆ, ನಾನು ಆ ಅಸ್ತಿತ್ವವನ್ನು ನಿಜವಾಗಿಯೂ ಅನುಭವಿಸುವುದಾದರೆ, ನಾನು ಯಾವ ಸ್ಥಿತಿಯಲ್ಲಿರಬಹುದು?'

– ಶಶಿಕಲ ಸಾಯಿನಾಥ್

ಧ್ಯಾನ ಮಾಡುವಾಗ ನಾನು ಕಣ್ಣುಮುಚ್ಚಿದಾಕ್ಷಣ ಬೆಳಕು ಮತ್ತು ಚೈತನ್ಯವನ್ನು ಅನುಭವಿಸುತ್ತೇನೆ. ನನ್ನಲ್ಲಿ ಒಂದು ರೀತಿಯ ವಿಶ್ರಾಂತಿಯುಂಟಾಗಿ ಅದು ಹೊರಗೆ ಸ್ಫೋಟಿಸುತ್ತದೆ. ಕೆಲವು ಸಲ ಅದು ನನ್ನ ತಲೆಯಿಂದ ಹೊರಗೆ ಹರಿದಂತಾಗುತ್ತದೆ.

– ಗೀತಾಂಜಲಿ ಬಾಲಕೃಷ್ಣ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ